
# ಶೋಧದ ನೆಲೆ

ಸಂಪಾದಕರು

ಡಾ. ತಿಪ್ಪೇಸ್ವಾಮಿ. ಡಿ. ಎಸ್

ಡಾ. ಶಿವಲಿಂಗಪ್ಪ. ಆಯ್. ಭಂಡಾರಿ



Scanned with OKEN Scanner

| | | |
|---|---|---|
| ಶೋಧದ ನೆಲೆ | : | ಸಂಶೋಧನಾ ಲೇಖನಗಳು |
| ಲೇಖಕರು | : | **ಡಾ. ತಿಪ್ಪೇಸ್ವಾಮಿ ಡಿ. ಎಸ್.**<br>ಹುನಗುಂದ, ಬಾಗಲಕೋಟೆ<br>**ಡಾ. ಶಿವಲಿಂಗಪ್ಪ ಆಯ್. ಭಂಡಾರಿ**<br>ಸಿಂಧಗಿ, ವಿಜಯಪುರ |
| ಪ್ರಕಾಶಕರು | : | **ಎಸ್.ಎಲ್.ಎನ್. ಪಬ್ಲಿಕೇಷನ್**<br>ನಂ. 3437, 4ನೇ ಮುಖ್ಯರಸ್ತೆ, 9ನೇ<br>ಅಡ್ಡರಸ್ತೆ, ಶಾಸ್ತ್ರಿನಗರ, ಬನಶಂಕರಿ 2ನೇ<br>ಹಂತ, ಬೆಂಗಳೂರು-29 ಮೊ : 9972129376 |
| ISBN | : | 978-81-948128-4-5 |
| ಪ್ರಥಮ ಮುದ್ರಣ | : | 2020 |
| ಅಳತೆ | : | 1/8 ಡೆಮ್ಮಿ |
| ಕಾಗದದ ಬಳಕೆ | : | 70 ಜಿ.ಎಸ್.ಎಂ. ಮ್ಯಾಪ್ಲಿಥೋ |
| ಪುಟಗಳು | : | xxiv+320=344 |
| ಹಕ್ಕುಗಳು | : | ಲೇಖಕರದ್ದು |
| ಪ್ರತಿಗಳು | : | 1000 |
| ಬೆಲೆ | : | **ರೂ. 320-00** |
| ಮುಖಪುಟ ವಿನ್ಯಾಸ | : | ಕೆ.ಕೆ.ಮಕಾಳಿ, ಹಂಪೆ |
| ಅಕ್ಷರ ಜೋಡಣೆ | : | ಸಹನಾ ಗ್ರಾಫಿಕ್ಸ್, ಬೆಂಗಳೂರು. 9342196255 |
| ಮುದ್ರಣ | : | ಓಂ ಶ್ರೀ ಪ್ರಿಂಟರ್ಸ್, ಕಸ್ತೂರಿ ಬಾ ನಗರ<br>ಬೆಂಗಳೂರು |

# ಪರಿವಿಡಿ

ಮುನ್ನುಡಿ

ಸಂಪಾದಕರ ಮಾತು

ಪ್ರಕಾಶಕರ ಮಾತು

1. ತುಘಲಕ್ : ಸಾಂಪ್ರದಾಯಿಕತೆ ಮತ್ತು ಆಧುನಿಕತೆ
**ಡಾ. ಎಸ್. ಆರ್. ಗೋಲಗೊಂಡ**

2. ಕೃಷ್ಣೆ ಹರಿದಳು ಕಾದಂಬರಿಯಲ್ಲಿ ಮಹಿಳಾ ಅಸ್ಮಿತೆಯ ಅನಾವರಣ
**ಡಾ. ಶಿವಲಿಂಗಪ್ಪ ಆಯ್. ಭಂಡಾರಿ**

3. ತತ್ವಪದಗಳಲ್ಲಿ ವ್ಯಕ್ತಿ ಸುಧಾರಣೆ ಮತ್ತು ಸಮಾಜಿಕ ಸುಧಾರಣೆ
**ಡಾ. ತಿಪ್ಪೇಸ್ವಾಮಿ ಡಿ. ಎಸ್**

4. ಶಾಂತಾದೇವಿ ಕಣವಿಯವರ ಸಣ್ಣಕತೆಗಳಲ್ಲಿ ಕುಟುಂಬ ಸಂಸ್ಕೃತಿ
**ಡಾ. ಶಕುಂತಲಾ ಜಿ. ನಾವಲಗಿ**

5. ಡಾ. ಬಿ.ವ್ಹಿ. ಶಿರೂರ ಅವರ ವಚನಗ್ರಂಥ ಸಂಪಾದನೆ
**ಡಾ. ವ್ಹಿ. ಬಿ. ಸಣ್ಣಸಕ್ಕರಗೌಡರ**

6. ಕರ್ನಾಟಕದ ಕಳಚೂರಿಗಳ ಶಾಸನೋಕ್ತ ಧರ್ಮಗಳು.
**ಪ್ರೊ.ಎಸ್.ಆರ್.ನಾಗಣ್ಣವರ**

7. ‘ಹಿಂದೂ ಕೋಡ್ ಬಿಲ್’ಗಾಗಿ ಪ್ರಾಣವನ್ನು ಪಣಕಿಟ್ಟು ಹೋರಾಡಿ ಡಾ.ಬಿ.ಆರ್.ಅಂಬೇಡ್ಕರ್
**ಡಾ.ಶಿವಲಿಂಗಪ್ಪ ಆಯ್.ಭಂಡಾರಿ**

8. ಭಕ್ತರ ಅಕ್ಷಯಪಾತ್ರೆ ತಲೆಕಟ್ಟು(ಅಂಕಲಿ) ಮಠ
**ಬೆಟ್ಟಪ್ಪ**

9. ದಲಿತ ಸಂಘಟನೆಗಳು ಹಾಗೂ ಸಾಮಾಜಿಕ ನ್ಯಾಯ
**ಡಾ. ಎಚ್. ಕುಮಾರಸ್ವಾಮಿ**

10. ವಚನ ಸಾಹಿತ್ಯದಲ್ಲಿ ಸಿರಿತನ, ಒಡೆತನ ಮತ್ತು ಬಡತನ: ಸಾಂಸ್ಕೃತಿಕ ನೆಲೆಗಳು. **ಡಾ. ಸಿ.ಟಿ.ಜಯಣ್ಣ**

11. ವಚನ ಸಾಹಿತ್ಯದಲ್ಲಿ ಮಹಿಳೆ
**ಡಾ. ನಾಗರತ್ನಾ.ಅ.ಭಾವಿಕಟ್ಟಿ**

12. ಬಯಲಾಟಗಳಲ್ಲಿ ಕಲ್ಯಾಣದ ಕಥೆಗಳು
**ಡಾ. ಹಂದೇರ ಮೂಗವ್ವ**

13. ಕನಕದಾಸರ ಸಾಹಿತ್ಯದಲ್ಲಿ ಭಕ್ತಿಯ ಸ್ವರೂಪ
**ಓಬಳಯ್ಯ. ಆರ್**

14. ಕನ್ನಡ ಕಾದಂಬರಿಗಳಲ್ಲಿ ರೈತರ ಜೀವನದ ಪ್ರಸಂಗಗಳು
**ಡಾ. ತಿಪ್ಪೇಸ್ವಾಮಿ ಡಿ.ಎಸ್**

15. ಭಾರತದಲ್ಲಿ ಶಕ್ತಿ ಆರಾಧನೆ
**ಡಾ.ಎ.ಆರ್.ಮಹೇಂದ್ರ**

16. ಮಕ್ಕಳ ಕಾವ್ಯ : ಲಯ ಮತ್ತು ಛಂದೋವಿನ್ಯಾಸ
**ಡಾ.ರೇಣುಕಾ ಶಂ ಹೆಬ್ಬಾಳ**

17. ಜನಪದರ ಮಳೆ ಜ್ಞಾನಪರಂಪರೆ
**ಡಾ. ನಾಗೇಶ ಎಂ**

18. ತತ್ವಪದ ಪರಂಪರೆ ಹಾಗೂ ಸಂವಿಧಾನ
**ಶ್ರೀ ಚಂದ್ರಶೇಖರ ಹೆಗಡೆ**

Scanned with OKEN Scanner

Title- Tughalak: Conservatism and Modernism
- Dr. S. R. Golgond

# ತುಘಲಕ್ : ಸಾಂಪ್ರದಾಯಿಕತೆ ಮತ್ತು ಆಧುನಿಕತೆ

– ಡಾ. ಎಸ್. ಆರ್. ಗೋಲಗೊಂಡ

ಗಿರೀಶ ಕಾರ್ನಾಡರ 'ತುಘಲಕ್' ನಾಟಕವು ಮೊದಲು ಕನ್ನಡದಲ್ಲಿ 1964 ರಲ್ಲಿ ಪ್ರಕಟಗೊಂಡಿತು. "ಪ್ರಥಮ ದರ್ಜೆಯ ಯಾವುದೇ ಐತಿಹಾಸಿಕ ನಾಟಕವು ಕನ್ನಡ ನಾಟಕ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ" ಎಂದು ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು ಯಾವುದೋ ಸಂದರ್ಭದಲ್ಲಿ ಮಾಡಿದ್ದ ಒಂದು ಸಣ್ಣ ಟೀಕೆ ಹಾಗೂ ಸಮಕಾಲೀನ ರಾಜಕೀಯ ಪರಿಸ್ಥಿತಿ ಕಾರ್ನಾಡರಿಗೆ ಈ ಅದ್ಭುತ ಐತಿಹಾಸಿಕ ನಾಟಕ ಬರೆಯಲು ಪ್ರೇರಣೆಯಾದವು. ಭಾರತದ ಮಧ್ಯಕಾಲೀನ ಇತಿಹಾಸವನ್ನು (14ನೆಯ ಶತಮಾನದ್ದು) ಆಧಾರವಾಗಿಟ್ಟುಕೊಂಡು ಬರೆದ ಈ ನಾಟಕವು ಭಾರತೀಯ ಮತ್ತು ಜಗತ್ತಿನ ಹಲವಾರು ಭಾಷೆಗಳಲ್ಲಿ ಭಾಷಾಂತರಗೊಂಡು ಹಾಗೂ ವಿಶ್ವದ ವಿವಿಧ ರಂಗಸಜ್ಜಿಕೆಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡು, ಕಾರ್ನಾಡರಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಮಹತ್ತರ ಸ್ಥಾನಮಾನಗಳನ್ನು ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿತು. ಕಾರ್ನಾಡರೇ ಅನುವಾದಿಸಿದ ಇದರ ಇಂಗ್ಲೀಷ ರೂಪ 1972 ರಲ್ಲಿ ಪ್ರಕಟವಾಯಿತು. ಮೊದಲು 1965 ರಲ್ಲಿ ಕನ್ನಡದಲ್ಲಿ, 1966 ರಲ್ಲಿ ಉರ್ದುವಿನಲ್ಲಿ, ನಂತರ ಹಿಂದಿ, ಮರಾಠಿ ಹಾಗೂ ಬೆಂಗಾಲಿ ಭಾಷೆಗಳಲ್ಲಿ ಪ್ರದರ್ಶನಗೊಂಡಿತು. 1970 ರಲ್ಲಿ ಇದರ ಇಂಗ್ಲೀಷ ರೂಪ ಬಾಂಬೆಯಲ್ಲಿ ಪ್ರದರ್ಶನ ಕಂಡಿತು. ಮುಂದೆ 1979 ರಲ್ಲಿ ಬಿ.ಬಿ.ಸಿ.

Scanned with OKEN Scanner

ರೇಡಿಯೋ ಮೂಲಕ ಪ್ರಸಾರವಾಯಿತು. 1982 ರಲ್ಲಿ ಇಬ್ರಾಹಿಂ ಅಲ್ಕಾಜಿ ಅವರ ನಿರ್ದೇಶನದಲ್ಲಿ ಬ್ರಿಟನ್ನಿನಲ್ಲಿ ನಡೆದ ಭಾರತ ಉತ್ಸವದಲ್ಲಿಯೂ ಪ್ರದರ್ಶನ ಕಂಡು ಜನಪ್ರಿಯತೆಯ ಪರಕಾಷ್ಠೆ ತಲುಪಿತು.

ಕಾರ್ನಾಡರು ರಚಿಸಿದ ಈ ಐತಿಹಾಸಿಕ ನಾಟಕದ ಮೇಲೆ ಅಲ್ಜೇರಿಯಾದ ಖ್ಯಾತ ನಾಟಕಕಾರರೂ, ಕಾದಂಬರಿಕಾರರೂ, ನೋಬೆಲ್ ಬಹುಮಾನಕ್ಕೆ ಭಾಜನರೂ ಆದ ಆಲ್ಬರ್ಟ್ ಕಮ್ಯೂ ಅವರು ಬರೆದ 'ಕಾಲಿಗುಲಾ' ಎಂಬ ಅಸಂಗತ ನಾಟಕದ ಪ್ರಭಾವ ದಟ್ಟವಾಗಿದೆ, ಈ ನಾಟಕವು ಐತಿಹಾಸಿಕ ವ್ಯಕ್ತಿ ಕಥಾನಕವಾಗಿದ್ದು, 'ಹುಚ್ಚುತನ, ಹುಂಬತನ ಮತ್ತು ಕ್ರೌರ್ಯ' ವನ್ನು ಮೈಗೂಡಿಸಿಕೊಂಡ 'ಕಾಲಿಗುಲಾ' ಎಂಬ ಹೆಸರಿನಿಂದ ಕರೆಯಲ್ಪಡುವ ರೋಮನ್ ಚಕ್ರಾಧಿಪತಿಯ ಕುರಿತದ್ದಾಗಿದೆ. ನಾಟಕವು ಮಾನವನ ಮೂಲಭೂತ ಸಹಜ ಸಂಕಟಗಳ, ಅಸಹಾಯಕ ಪರಿಸ್ಥಿತಿಗಳ ಅಸಂಗತತೆಗಳನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. 'ತುಘಲಕ್' ನಾಟಕವು 'ಕಾಲಿಗುಲಾ' ನಾಟಕದಿಂದ ಪ್ರಭಾವಿತಗೊಂಡರೂ, ಅದರ ರಚನಾರೂಪ ಕೌಶಲ್ಯ ಕಾರ್ನಾಡರ ಅದ್ಭುತ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಅನೇಕ ವಿಮರ್ಶಕರು ತುಘಲಕ್ ನಾಟಕದಲ್ಲಿ ನವ್ಯ ಪ್ರಜ್ಞೆಯ ಅಸಂಗತ ನಾಟಕಗಳ ಲಕ್ಷಣಗಳನ್ನು ಹೇರಳವಾಗಿ ಗುರುತಿಸುತ್ತಾರೆ. ಆದರೆ ಡಾ. ಗಿರಡ್ಡಿ ಗೋವಿಂದರಾಜ ಅವರು ಈ ನಾಟಕದ ಜೀವನ ದೃಷ್ಟಿಯನ್ನು ಅಸಂಗತ ಎನ್ನುವದಕ್ಕಿಂತ ಅಸ್ತಿತ್ವವಾದಿ ಎನ್ನುವುದೇ ಹೆಚ್ಚು ಸೂಕ್ತವಾದದ್ದು ಎಂದು ಅಭಿಪ್ರಾಯಪಡುತ್ತಾರೆ. ಈ ಲೇಖನವು ತುಘಲಕ್ ನಾಟಕದಲ್ಲಿ ಸಂಪ್ರದಾಯಿಕತೆ ಹಾಗೂ ಆಧುನಿಕತೆಯ ವಿಚಾರಗಳು ಹೇಗೆ ಮೂಡಿ ಬಂದಿವೆ ಎಂದು ತಿಳಿಯಲು ಮಾಡಿದ ಒಂದು ಸಣ್ಣ ಪ್ರಯತ್ನವಷ್ಟೆ.

'ತುಘಲಕ್' ನಾಟಕವು ಮಧ್ಯಕಾಲೀನ ಭಾರತವನ್ನು ಆಳಿದ ಐಲುದೊರೆ, ಶತಮೂರ್ಖ, ಬುದ್ಧಿವಂತ, ಮಹಾ ಕನಸುಗಾರ, ಮಹಾತ್ವಾಕಾಂಕ್ಷಿ, ದುಂರತ ನಾಯಕ ರೋಮಾಂಚನಕಾರಿ ವ್ಯಕ್ತಿತ್ವ ಹೊಂದಿದ ಹೀಗೆ ಬಗೆ ಬಗೆಯಾಗಿ ಇತಿಹಾಸಕಾರರಿಂದ ವರ್ಣಿತಗೊಂಡ ಸುಲ್ತಾನ ಮುಹಮದ-ಬಿನ್-ತುಘಲಕ್ ಎಂಬ ಭ್ರಮನಿರಸನಗೊಂಡ ದೊರೆಯ ಕಥಾನಕವಾಗಿದ್ದರೂ, ಸ್ವತಂತ್ರ ಭಾರತದ ರಾಜಕೀಯ ಮತ್ತು ಸಾಮಾಜಿಕ ಜೀವನದ ಪರಿಸ್ಥಿತಿಗಳ ಅಭಿವ್ಯಕ್ತಿಯೂ ಹೌದು.

Scanned with OKEN Scanner

ಹೀಗೆ ಐತಿಹಾಸಿಕ ವಸ್ತುವನ್ನು ಸಮಕಾಲೀನಗೊಳಿಸುವದು, ಕಾರ್ನಾಡರ ನಾಟಕಗಳ ಒಂದು ಮುಖ್ಯ ವಿಶಿಷ್ಟ ಲಕ್ಷಣವೇ ಆಗಿದೆ. ಕಾರ್ನಾಡರು ತುಘಲಕ್ ದೊರೆಯನ್ನು ವೈಭವದ ಹಾಗೂ ಆಡಂಬರದ ನೆಲೆಯಲ್ಲಿ ಚಿತ್ರಿಸದೇ ಸಾಮಾನ್ಯ ಮನುಷ್ಯರ ನೆಲೆಯಲ್ಲಿಯೇ ಚಿತ್ರಿಸಿದ್ದಾರೆ. ಪ್ರಜೆಗಳ ಅಭ್ಯುದಯವನ್ನು ರೂಪಿಸುವ ರಾಜರ ಪಾತ್ರ ಎಷ್ಟೇ ದೊಡ್ಡದಾಗಿದ್ದರೂ, ರಾಜರ ಕನಸುಗಳನ್ನು ಸಾಕಾರಗೊಳಿಸಲು ಪ್ರಜೆಗಳ ಪಾತ್ರವನ್ನೂ ಕೂಡಾ ಅಲ್ಲಗಳೆಯಲಾಗದು. ದೆಹಲಿ ಸಿಂಹಾಸನವನ್ನೇರಿದ ಅರಸರಲ್ಲಿಯೇ ತುಘಲಕ್ ಅತ್ಯಂತ ತೀಕ್ಷ್ಣಮತಿ, ಬುದ್ಧಿವಂತ ದೊರೆಯಾಗಿದ್ದಾನೆ. ಅವನು ಜಾರಿಗೆ ತರಬಯಸುವ ಆಧುನಿಕ ಸುಧಾರಣಾ ನೀತಿಗಳು, ಆ ಕಾಲಘಟ್ಟದ ಪ್ರಜೆಗಳ ನಡೆನುಡಿ, ನಂಬಿಕೆಗಳು, ಧಾರ್ಮಿಕ ವಿಧಿಗಳನ್ನು ಮೀರಿದವುಗಳಾಗಿವೆ. ಆದ್ದರಿಂದ ಸಾಂಪ್ರದಾಯಿಕ ಮನಸ್ಸುಳ್ಳ, ಅಧಿಕಾರಿಗಳ, ಪ್ರಜೆಗಳ ಅಸಹಕಾರದಿಂದ ದೊರೆ ಕಂಡ ಕನಸುಗಳು ವಿಫಲತೆಯ ದಾರಿ ಹಿಡಿಯುತ್ತವೆ. ತನ್ನ ಆದರ್ಶಗಳ ಸಾಕಾರಕ್ಕಾಗಿ ಹಿಂಸೆಯ ದಾರಿ ತುಳಿದು ಜನರಿಂದ 'ಹುಚ್ಚ ಮುಹಮ್ಮದ' ಎಂಬ ಬಿರುದು ಪಡೆದುಕೊಳ್ಳುತ್ತಾನೆ. ಹೀಗೆ ಕಾರ್ನಾಡರ ತುಘಲಕ್ ಸಂಕೀರ್ಣ ವ್ಯಕ್ತಿತ್ವ ಹೊಂದಿದ್ದು, ಒಮ್ಮೆ ಭವ್ಯ ಕನಸುಗಾರನಾಗಿ, ಮತ್ತೊಮ್ಮೆ ಇಸ್ಲಾಂ ಧರ್ಮದ ಪರಮ ಅನುಯಾಯಿಯಾಗಿ, ಪರೋಪಕಾರಿಯಾಗಿ, ಕ್ಷಮಾಶೀಲನಾಗಿ, ಮುಗದೊಮ್ಮೆ ಅತ್ಯಂತ ಕ್ರೌರ್ಯವೆಸಗುವ ರಾಕ್ಷಸನಾಗಿ ಕಂಡು ಬರುತ್ತಾನೆ.

ನಾಟಕವು ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಘರ್ಷಣೆ ಹಾಗೂ ಅದರ ಪರಿಣಾಮಗಳನ್ನು ಅತ್ಯಂತ ಉತ್ತುಂಗವಾಗಿ ಚಿತ್ರಿಸಿದ, ಸುಂದರ, ಹೃದಯಸ್ಪರ್ಶಿ, ಮನೋವೈಜ್ಞಾನಿಕ ಕಥಾನಕವಾಗಿದೆ. ನಾಟಕದಲ್ಲಿ ಬರುವ ಎಲ್ಲ ಐತಿಹಾಸಿಕ ಘಟನೆಗಳು ಹಾಗೂ ಪಾತ್ರಗಳು ಸಂಪ್ರದಾಯಿಕತೆ ಮತ್ತು ಆಧುನಿಕತೆಯ ಘರ್ಷಣೆಯನ್ನು ಸಾಕ್ಷೀಕರಿಸುತ್ತವೆ. ಈ ಘರ್ಷಣೆ, ತುಘಲಕ್ ಹಾಗೂ ಕಟ್ಟರ್ ಹಿಂದೂ ಮತ್ತು ಮುಸ್ಲಿಂ ಅನುಯಾಯಿಗಳ ಮಧ್ಯ ಜರುಗುತ್ತದೆ. ತುಘಲಕ್ ಗ್ರೀಕ್, ಚೀನಿ ತತ್ವಜ್ಞಾನಗಳನ್ನು ಬಲ್ಲವನಾಗಿದ್ದಾನೆ. ಸಾಕ್ರೆಟಿಸ್, ಪ್ಲೇಟೋರಂಥ ದಾರ್ಶನಿಕರು ಕಂಡ ಸತ್ಯದ ಬಗ್ಗೆ ಅಪಾರ ಗೌರವವುಳ್ಳವನಾಗಿದ್ದಾನೆ. "ಇತಿಹಾಸ ನಮ್ಮದು! ನಾವು ಬೆಳಕಾಗಿ ಬಾಳನ್ನು ಚಿಗುರಿಸೋಣ", ಎಂಬ ಅವನ ಉದಾತ್ತ ಕರೆ, "ಈ ಹೊತ್ತಿನಲ್ಲಿ ಹುಗಿದು ಹೋದವರಿಗೆ ನಾಳಿನ ಬುದ್ಧಿ

Scanned with OKEN Scanner

ಹೇಗೆ ಬಂದೀತು?" ಎನ್ನುವ ದೂರದೃಷ್ಟಿ, "ನನಗೆ ರಾಜ್ಯದಲ್ಲಿ ಸಮತೆ ಬೇಕು, ತರ್ಕಶುದ್ಧ ನ್ಯಾಯ ಬೇಕು, ಶಾಂತಿ ಇದ್ದರೆ ಸಾಕಾಗಲಿಲ್ಲ, ಜೀವಕಳೆ ಬೇಕು" ಎಂದು ಹಂಬಲಿಸುತ್ತಾನೆ. ಉಳಿದ ಮೂಲಭೂತವಾದಿ ಅರಸರಂತೆ ರಾಜದಂಡದಿಂದ ರಾಜ್ಯವನ್ನು ಆಳದೇ ಬುದ್ಧ, ಜರತುಸ್ತ್ರಾ, ಗ್ರೀಕ ತತ್ವಜ್ಞಾನಿಗಳು ಹೇಳಿದ ಆದರ್ಶಗಳ ಬೆಳಕಿನಡಿಯಲ್ಲಿ, ಮುನ್ನೆಡೆಸಬೇಕೆಂಬ ಮಹಾತ್ವಾಕಾಂಕ್ಷೆ ಹೊಂದಿದ್ದಾನೆ. ಆದರೆ ಈ ಶ್ರೇಷ್ಠ ಆದರ್ಶ ನೈತಿಕ ಮೌಲ್ಯಗಳಿಗೂ ಅವನು ರಾಜನೀತಿಯಲ್ಲಿ ಅನುಸರಿಸುವ ಕಠೋರ ಕ್ರಮಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ಅವನ ಈ ಕುಟಿಲ ರಾಜಕೀಯ ನೀತಿಗಳು ಅವನ ಆದರ್ಶಗಳನ್ನು ಸೋಲಿಸುತ್ತ ನಡೆಯುತ್ತವೆ. ಸಾಂಪ್ರದಾಯಿಕ ಮನಸ್ಸುಳ್ಳ ಧರ್ಮಗುರುಗಳು, ಅಮೀರರು ಆತನ ಆದರ್ಶಗಳ ಬಗ್ಗೆ ಸಂಶಯ ತಾಳುತ್ತಾರೆ.

ಇತಿಹಾಸದ ಪುಟಗಳಿಂದ ಆಯ್ದುಕೊಂಡ ವಿಷಯವಾಗಿದ್ದರಿಂದ ತುಘಲಕ್ ನಾಟಕವು ಒಂದು ಐತಿಹಾಸಿಕ ನಾಟಕವಾಗಿ ಚರಿತ್ರೆಯ ದಾಖಲೆಗೂ ಅನುವು ಮಾಡಿಕೊಡುತ್ತದೆ. ಈ ದೊರೆ ಬದುಕಿದ್ದ ಕಾಲವು ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷದಿಂದ ಮುಕ್ತವಾಗಿಲ್ಲ. ಹಾಗೆ ನೋಡಿದರೆ ಎಲ್ಲ ಕಾಲಘಟ್ಟಗಳೂ ಇದರಿಂದ ಹೊರತಾಗಿಲ್ಲವೆಂದೇ ಹೇಳಬೇಕು. ಒಂದು ಹೊಸವಿಚಾರ ಸಮಾಜದಲ್ಲಿ ಅವತರಿಸುತ್ತಲೇ ಅದು ಸಾಂಪ್ರದಾಯಿಕ ವಿಚಾರದೊಂದಿಗೆ ಘರ್ಷಣೆಗಿಳಿಯುವದು ಸಾಮಾನ್ಯ. ಎಲ್ಲ ವಿರೋಧಗಳನ್ನು ಮೆಟ್ಟಿ ನಿಂತ ಹೊಸವಿಚಾರ ಇನ್ನೊಂದು ವಿಚಾರ ಹುಟ್ಟಿಕೊಳ್ಳುತ್ತಲೇ ಸಾಂಪ್ರದಾಯಿಕವಾಗಿಬಿಡುತ್ತದೆ. ಆದ್ದರಿಂದ ಇವುಗಳ ಸಂಘರ್ಷ ಸಮಾಜದಲ್ಲಿ ನಿರಂತರವಾದದ್ದು ಎಂದೇ ಹೇಳಬೇಕಾಗುತ್ತದೆ. ನಾಟಕದಲ್ಲಿ ಈ ಸಂಘರ್ಷ ದೊರೆಯ ವೈಯಕ್ತಿಕ ಹಾಗೂ ಸಾಮಾಜಿಕ ಮಟ್ಟಗಳೆರಡರಲ್ಲಿಯೂ ಸಾಗುತ್ತಾ ಹೋಗುತ್ತದೆ. ತುಘಲಕ್‌ನ ಅಸಾಮಾನ್ಯ ಹಾಗೂ ಸಂಕೀರ್ಣ ವ್ಯಕ್ತಿತ್ವ ಹಾಗೂ ಚರಿತ್ರೆಗಳಲ್ಲಿ ಆತನು ಎದುರಿಸಿದ ವಿರೋಧಗಳ ಬಗ್ಗೆ ಕಾರ್ನಾಡರು ಚರ್ಚಿಸಿದರೂ ಕೂಡಾ, ಈ ನಾಟಕವು ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಬಗ್ಗೆ ಅಂದರೆ ನೆಹರು ಯುಗದ ಸಾಮಾಜಿಕ ಸ್ಥಿತ್ಯಂತರಗಳ ಚರ್ಚೆಯಾಗಿದೆ ಎಂದು ಕೆಲವು ವಿಮರ್ಶಕರು ಅಭಿಪ್ರಾಯಪಡುತ್ತಾರೆ. "ಒಂದು ಅರ್ಥದಲ್ಲಿ ಈ ನಾಟಕವು

ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಬಗ್ಗೆ ನಮ್ಮ ತಲೆಮಾರಿನಲ್ಲುಂಟಾದ ಮಂದಗತಿಯ ಭ್ರಮನಿರಸನವನ್ನು ಎಂದರೆ ಸ್ವಾತಂತ್ರ್ಯ ಚಳುವಳಿಗೆ ಮಾರ್ಗದರ್ಶಕವಾಗಿದ್ದ ನೈತಿಕ ಮೌಲ್ಯಗಳ ಹ್ರಾಸವನ್ನು ಹಾಗೂ ವಾಸ್ತವ ರಾಜಕಾರಣದೊಡನೆ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ" ಎಂದು ಸ್ವತಃ ಕಾರ್ನಾಡರೇ ಈ ವಿಷಯದ ಕುರಿತು ಸ್ಪಷ್ಟಪಡಿಸಿದ್ದಾರೆ. ಅವರು ಇನ್ನೂ ಮುಂದುವರೆದು "ತುಘಲಕ್ ದೊರೆಯ ಕಾಲಘಟ್ಟ, ಸಮಕಾಲೀನ ಸ್ವತಂತ್ರ ಭಾರತದ ಕಾಲಘಟ್ಟವನ್ನೇ ಹೋಲುತ್ತದೆ. ಆದರ್ಶವಾದಿ ಹಾಗೂ ವಿಚಾರವಾದಿಯೂ ಆಗಿದ್ದ ಒಬ್ಬ ಬಲಿಷ್ಠ ದೊರೆ ದೆಹಲಿ ಸಿಂಹಾಸನವೇರಿದ್ದ. 20 ವರುಷಗಳಲ್ಲಿಯೇ ಆತನ ಸುಧಾರಣಾ ನೀತಿಗಳು ವೈಫಲ್ಯತೆ ಕಂಡು, ಆತ ಭ್ರಮನಿರಸನಗೊಂಡು ಅಧಃಪತನ ಹೊಂದಿದ ದಾಖಲೆ ಇದೆ. ಈ ಎರಡೂ ಕಾಲಘಟ್ಟಗಳಲ್ಲಿ ಸಾಕಷ್ಟು ಸಾಮ್ಯತೆಗಳಿವೆ" ಎಂದು ಹೇಳಿದ್ದಾರೆ. ನೆಹರೂ ಯುಗವನ್ನು ಕುರಿತು ಕಾರ್ನಾಡರು ಈ ಮಾತನ್ನು ಹೇಳಿದ್ದರೂ ನಾಟಕವು ಸ್ವತಂತ್ರ ಭಾರತದ ರಾಜಕೀಯ ನಾಯಕರಾದ, ಮಹಾತ್ಮಾಗಾಂಧಿ, ಇಂದಿರಾಗಾಂಧಿ, ಮುಂತಾದವರು ಕಟ್ಟಬಯಸಿದ ಆಧುನಿಕ ಭಾರತದ ಮಹಾಪರಿಕಲ್ಪನೆ ಹಾಗೂ ವೈಫಲ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದೂ ಅಲ್ಲದೆ, ವಸಾಹತೋತ್ತರ ಭಾರತದ ರಾಜಕೀಯ ಅಧಿಕಾರವನ್ನು ಜನಾಂಗೀಯ ಹಾಗೂ ಧಾರ್ಮಿಕ ಭಿನ್ನತೆಗೆ ಬದ್ಧರಾಗಿರವ ಎರಡು ಪ್ರಬಲ ಗುಂಪುಗಳು ನಡೆಸುವಂತಾಯಿತು ಎಂದು ನಾಟಕವು ಸಾಂಕೇತಿಕವಾಗಿ ಹೇಳಿದಂತಿದೆ.

ತುಘಲಕ್ ನಾಟಕದ ಮುಖ್ಯ ಹಾಗೂ ಉಪಕಥಾನಕಗಳಲ್ಲಿ ಸಂಪ್ರದಾಯಿಕತೆ ಹಾಗೂ ಆಧುನಿಕತೆಯ ಸಂಘರ್ಷ ಗೋಚರವಾಗುತ್ತದೆ. ಸುಲ್ತಾನರ ಹೊಸ ರಾಜಕೀಯ ನೀತಿಗಳು ಹೇಗೆ ಬದಲಾವಣೆ ಬಯಸಿದ, ಮೌಢ್ಯತೆಯ ಕಟ್ಟರ್ ಮೂಲಭೂತವಾದಿ ಮನೋಸ್ಥಿತಿಯ ಮುಸಲ್ಮಾನರ ವಿಚಾರಗಳೊಂದಿಗೆ ಹೇಗೆ ಸಂಘರ್ಷಕ್ಕಿಳಿಯುತ್ತವೆ ಎಂದು ನಾಟಕವು ಸೂಕ್ಷ್ಮವಾಗಿ ಪ್ರಚುರಪಡಿಸುತ್ತದೆ. ಈ ವಿರೋಧ ನಾಟಕದ ಪ್ರಾರಂಭದಲ್ಲಿಯೇ ಮುಸಲ್ಮಾನರನ್ನು ಪ್ರತಿನಿಧಿಸುವ ಮುದುಕನ ಮಾತುಗಳಲ್ಲಿ ವ್ಯಕ್ತವಾಗುವದು ಹೀಗೆ, "ಏನಾಗುವದಿದೆಯೋ ಏನೋ ಈ ನಾಡಿಗೆ?" ಈ ಮಾತನ್ನು ಕೇಳಿಸಿಕೊಂಡ ತರುಣ ವ್ಯಕ್ತಿ ತುಘಲಕನ

ನೀತಿಗಳನ್ನು ಸಮರ್ಥಿಸಿ "ಏಕೆ ಅಜ್ಜಾ, ನಿನಗೆ ಯಾವುದರ ಚಿಂತೆ ಹತ್ತಿದೆ? ಈಗ ನಮ್ಮ ದೇಶ ಸಂಪೂರ್ಣವಾಗಿ ಸುರಕ್ಷಿತವಾದ ಕೈಗಳಲ್ಲಿದೆ" ಎಂದು ಹೇಳುತ್ತಾನೆ. ಹೀಗೆ ನಾಟಕವು ಹಳತು ಮತ್ತು ಹೊಸತು, ಮೌಢ್ಯತೆ ಹಾಗೂ ವೈಚಾರಿಕತೆಯ ನಡುವೆ ಹುಟ್ಟಿಕೊಂಡ ಸಂಘರ್ಷದ ಬಗ್ಗೆ ಬೆಳಕು ಚೆಲ್ಲುತ್ತದೆ. ತುಘಲಕನ ವಿಭಿನ್ನ ಆಡಳಿತದ ವೈಖರಿ, ಆತನ ವಿಚಿತ್ರ ಸ್ವಭಾವ, ನಡವಳಿಕೆ, ಮೌಢ್ಯತೆಯನ್ನೇ ಹೊದ್ದು ಮಲಗಿದ ಧರ್ಮನಿಷ್ಠ ಮುಸಲ್ಮಾನರನ್ನು ಆತಂಕಕ್ಕೆ ಹಾಗೂ ಗೊಂದಲಕ್ಕೀಡುಮಾಡಿವೆ. ಅವನ ವ್ಯಕ್ತಿತ್ವದಲ್ಲಿ ವಿರೋಧವೆನಿಸುವ ಅನೇಕ ಎಳೆಗಳು; ಆದರ್ಶವಾದ ಹಾಗೂ ರಾಜಕೀಯ ಕುಟಿಲನೀತಿ ಸೇರಿಕೊಂಡಿವೆ. ಅವನನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೆಂದು ಜನರಿಗೆ ತಿಳಿಯದಾಗಿದೆ. ತನ್ನ ತಂದೆ ಮತ್ತು ಒಡಹುಟ್ಟಿದ ತಮ್ಮನನ್ನು ಪ್ರಾರ್ಥನಾ (ನಮಾಜ) ವೇಳೆಯಲ್ಲಿ ಕೊಲ್ಲಿಸಿ, ಅಧಿಕಾರಕ್ಕೆ ಬಂದ ತುಘಲಕ ಈಗ ತನ್ನ ಸಾಮ್ರಾಜ್ಯದಲ್ಲಿ ಎಲ್ಲ ಮುಸಲ್ಮಾನರು ದಿನಕ್ಕೆ ಐದು ಬಾರಿ ಪ್ರಾರ್ಥನೆ (ನಮಾಜ) ಮಾಡುವದನ್ನು ಕಡ್ಡಾಯಗೊಳಿಸಿದ್ದಾನೆ. ಈ ಧರ್ಮದ್ರೋಹದ ವಿಷಯದ ಕುರಿತು ಇಸ್ಲಾಂ ಧರ್ಮಸಂತ ಶೇಖ ಇಮಾಮುದ್ದೀನರು ಕಾನ್ಪುರದಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿ ಜನರನ್ನು ಎಚ್ಚರಿಸುವ ಕೆಲಸದಲ್ಲಿ ನಿರತರಾಗಿದ್ದಾರೆ, ಇದು ಸಹಜವಾಗಿ ಸುಲ್ತಾನರಿಗೆ ಕೋಪ ತರಿಸಿದೆ. ಹಿಂದುಗಳ ಮೇಲೆ ಯಾವಾಗಲೂ ಸಾಂಪ್ರದಾಯಿಕ ಮುಸಲ್ಮಾನ ದೊರೆಗಳು ವಿಧಿಸುತ್ತಿದ್ದ ಖುರಾನ ಸಮ್ಮತ ಜೆಝಿಯಾ ತೆರಿಗೆಯನ್ನು ರದ್ದುಗೊಳಿಸಿ ಧರ್ಮನಿಷ್ಠ ಮುಸಲ್ಮಾನರ ಕೋಪಕ್ಕೆ ಗುರಿಯಾಗಿದ್ದಾನೆ. ಹಾಗೆನೆಯೇ ಹಿಂದೂ ಸ್ತ್ರೀಯರು ಸತಿ ಹೋಗುವದನ್ನು ನಿಷೇಧಿಸಿ ಹಿಂದೂ ಜನರ ಆಕ್ರೋಶಕ್ಕೂ ಈಡಾಗಿದ್ದಾನೆ. ಹೀಗೆ ತುಘಲಕ್ ದೊರೆ ಎಲ್ಲ ಧರ್ಮದ, ಎಲ್ಲ ಜಾತಿಯ ಜನರೊಡನೆ ಪಕ್ಷಪಾತವಿಲ್ಲದೇ ಒಬ್ಬ ಸಾಮಾನ್ಯ ಮನುಷ್ಯನಂತೆ ವರ್ತಿಸುತ್ತಾ, ಸಾಮಾಜಿಕ ನ್ಯಾಯ & ಸಮಾನತೆಯ ಬಗ್ಗೆ ಮಾತನಾಡತೊಡಗಿದ್ದಾನೆ. ಸುಲ್ತಾನರಿಂದ ಅಥವಾ ಸುಲ್ತಾನರ ಅಧಿಕಾರಿಗಳಿಂದ ಪ್ರಜೆಗಳಿಗೆ ಯಾವುದೇ ರೀತಿಯ ಅನ್ಯಾಯವಾದರೆ ಸ್ವತಃ ಸುಲ್ತಾನರ ವಿರುದ್ಧವೇ ಫಿರ್ಯಾದು ಸಲ್ಲಿಸಬಹುದೆಂದು ಡಂಗುರ ಸಾರಿಸಿ ಪ್ರಜಾಪ್ರಭುತ್ವವಾದಿಯ ವೇಷ ತೊಟ್ಟಿದ್ದಾನೆ. ಸುಲ್ತಾನರ ಈ ಆದರ್ಶವನ್ನು ಅಝೀಝು ಎಂಬ ಮುಸಲ್ಮಾನ ಅಗಸ ದುರುಪಯೋಗಪಡಿಸಿಕೊಂಡಿದ್ದಾನೆ. ತಲೆ ಬೋಳಿಸಿಕೊಂಡು ತಾನೇ

ವಿಷ್ಣುಪ್ರಸಾದನೆಂಬ ಬ್ರಾಹ್ಮಣನೆಂದು ಹೇಳಿಕೊಂಡು, ಸುಲ್ತಾನರ ಅಧಿಕಾರಿಗಳು ವಶಪಡಿಸಿಕೊಂಡ ಭೂಮಿಯನ್ನು ಮರಳಿ ಪಡೆಯುವದಕ್ಕಾಗಿ, ಸುಲ್ತಾನರ ವಿರುದ್ಧವೇ ತಕರಾರು ಮಾಡಿ, ಗೆದ್ದು ಜಮೀನನ್ನು ಮರಳಿ ಪಡೆಯುತ್ತಾನೆ. ಇದೂ ಅಲ್ಲದೇ ಪರಿಹಾರಕ್ಕಾಗಿ 500 ಬೆಳ್ಳಿ ದೀನಾರುಗಳನ್ನು ಹಾಗೂ ಸುಲ್ತಾನರ ಆಡಳಿತ ವ್ಯವಸ್ಥೆಯಲ್ಲಿ ನೌಕರಿ ಗಿಟ್ಟಿಸಿಕೊಳ್ಳುತ್ತಾನೆ.

ಈ ತೀರ್ಪನ್ನು ಸುಲ್ತಾನರು ತುಂಬು ಹೃದಯದಿಂದ ಒಪ್ಪಿ ತಾನು ಯಾವಾಗಲೂ ಜನರ ಪರವಾಗಿರುತ್ತೇನೆ ಎಂದು ಜನರಲ್ಲಿ ನಂಬಿಕೆ ಹುಟ್ಟಿಸಿ, ನ್ಯಾಯಾಲಯದಿಂದ ಹೊರಬಂದು ಪ್ರಜೆಗಳನ್ನು ಉದ್ದೇಶಿಸಿ ತನ್ನ ವಿಚಾರಸೌಧವನ್ನು ಜನರ ಮುಂದಿಡುತ್ತಾನೆ. ತನ್ನ ಸಾಮ್ರಾಜ್ಯದಲ್ಲಿ ಇನ್ನು ಮುಂದೆ ಹಿಂದೂ ಮತ್ತು ಮುಸ್ಲೀಮರು ಸಹೋದರರಂತೆ ಒಟ್ಟಾಗಿ ಬಾಳಬೇಕೆಂದು ಕರೆಕೊಡುತ್ತಾನೆ. ರಾಜ್ಯದಲ್ಲಿ ಪ್ರಗತಿ, ನ್ಯಾಯ, ಸಮಾನತೆ, ಸೋದರತ್ವ ಇರಬೇಕೆಂದೂ, ಇವುಗಳ ಸಾಕಾರಕ್ಕಾಗಿ ಒಂದು ಹೊಸ ಹೆಜ್ಜೆ ಇಡುತ್ತಿದ್ದೇನೆಂದೂ, ಇದೇ ವರ್ಷ ತನ್ನ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ಬದಲಾಯಿಸುತ್ತಿದ್ದೇನೆಂದು ಹೇಳುತ್ತಾನೆ. ಮೊಗಲ್ ಆಕ್ರಮಣಕಾರರ ದಾಳಿಗೆ ತುತ್ತಾಗುತ್ತಿರುವ ದೆಹಲಿಗಿಂತ, ಸಾಮ್ರಾಜ್ಯದ ಹನ್ನೆರಡು ಪ್ರಾಂತಗಳಿಗೂ ಕೇಂದ್ರದಲ್ಲಿರುವ ದೌಲತ್ತಾಬಾದ ರಾಜಧಾನಿಯಾದರೆ ಸಾಮ್ರಾಜ್ಯದ ಮೇಲೆ ಸರಳವಾದ ಹಿಡಿತ ಸಾಧಿಸಬಹುದು ಎಂದು ಹೇಳುತ್ತಾನೆ. ಮುಖ್ಯವಾಗಿ ಹಿಂದೂ ಜನರ ನಗರವಾದ ದೌಲತಾಬಾದ್‌ನ್ನು ರಾಜಧಾನಿಯನ್ನಾಗಿ ಮಾಡಿದರೆ, ಹಿಂದೂ–ಮುಸಲ್ಮಾನರಲ್ಲಿ ಸ್ನೇಹ ಬೆಳೆಸಬಹುದೆಂದು ವಿವರಿಸಿ, ತಾನು ಕಟ್ಟಲಿರುವ ಉಜ್ವಲ ಭವಿತವ್ಯದಲ್ಲಿ ವಿಶ್ವಾಸವಿರುವವರೆಲ್ಲ ತನ್ನೊಟ್ಟಿಗೆ ಬರಬೇಕೆಂದು ಆಮಂತ್ರಣವೀಯುತ್ತಾನೆ. ಈ ವಿಚಾರವೂ ಕೂಡಾ ಮುಸಲ್ಮಾನ ಪ್ರಜೆಗಳಲ್ಲಿ ಸುಲ್ತಾನರ ಬಗ್ಗೆ ಅಸಹನೆ ಮೂಡುವಂತಾಗುತ್ತದೆ.

ಮುಹಮ್ಮದ ಒಂದು ದಿನ ರಾತ್ರಿ ಆಸ್ಥಾನದಲ್ಲಿ ನಿದ್ದೆಗೆಟ್ಟು ಶತಪಥ ಹೆಜ್ಜೆ ಹಾಕುತ್ತಿದ್ದಾನೆ. ಮಲತಾಯಿ ಅಲ್ಲಿಗೆ ಬಂದು "ನಿದ್ರೆ ಇಲ್ಲದ ರಾತ್ರಿಗಳನ್ನೇಕೆ ಕಳೆಯುತ್ತಿ?" ಎಂದು ಪ್ರಶ್ನಿಸುತ್ತಾಳೆ. ಆಗ ಆತನು ಜನರ ಅಭ್ಯುದಯದ ಬಗ್ಗೆ ಚಿಂತಿತನಾಗಿದ್ದೇನೆಂದು ತಿಳಿಸುತ್ತಾನೆ. ಇಲ್ಲಿಯವರೆಗೆ ಭಾರತದ ಯಾವ ಅರಸರೂ

ಮಾಡಲಾರದ ಕಾರ್ಯಗಳನ್ನು ತಾನು ಜನರ ಪ್ರಗತಿಗಾಗಿ ಮಾಡಬೇಕಾಗಿದೆ. ಹಿಂದೂ-ಮುಸ್ಲೀಮರ ಏಕತೆ, ಸಹೋದರತ್ವ, ಸಾಮಾಜಿಕ ನ್ಯಾಯ, ಶಾಂತಿಗಾಗಿ ತಾನು ಎಲ್ಲ ತ್ಯಾಗಕ್ಕೂ ಸಿದ್ಧನಾಗಿದ್ದೇನೆಂದು ತಿಳಿಸುತ್ತಾನೆ. ಇಲ್ಲಿ ನಿದ್ರೆ ಎಂಬುದು ಸಾಂಕೇತಿಕವಾಗಿ ವ್ಯರ್ಥಸಮಯದ ಹಾಳು ಎಂದು ಸೂಚಿಸುತ್ತದೆ. ಮುಂದುವರಿದು ಆತ, ಆಯಿನೇ ಉಲ್ಮುಲ್ಕ ತನ್ನ ಚದುರಂಗದಾಟದ ಗೆಳೆಯ ಮೂವತ್ತು ಸಾವಿರ ಸೈನಿಕರೊಂದಿಗೆ ದೆಹಲಿಯ ಮೇಲೆ ಆಕ್ರಮಣವೆಸಗಲು ಬರುತ್ತಿದ್ದಾನೆ (ರಾಜಕೀಯ ಚದುರಂಗದಾಟದಲ್ಲಿ ಯಾರೂ ಮಿತ್ರರಲ್ಲ, ಯಾರೂ ಶತ್ರುಗಳಲ್ಲ) ಇದು ಆತಂಕದ ವಿಷಯವೇನಲ್ಲ, ತನಗಿದ್ದ ಚಿಂತೆ ತನ್ನ ವೈರಿಗಳದ್ದಲ್ಲ, ತನ್ನ ಪ್ರಜೆಗಳದ್ದು, ಆದ್ದರಿಂದ ತನಗೆ ನಿದ್ರೆ ಬರುತ್ತಿಲ್ಲ ಎಂದು ತಿಳಿಸುತ್ತಾನೆ. ತುಘಲಕ್ ಪ್ರತಿಯೊಂದು ಪ್ರತಿಕೂಲ ಸಂದರ್ಭವನ್ನು ತನ್ನ ರಾಜಕೀಯ ಅನುಕೂಲಕ್ಕಾಗಿ ಬಳಸಿಕೊಳ್ಳುವ ಚಾಣಾಕ್ಷ, ಚತುರ, ಕುಟಿಲ ನೀತಿಯ ರಾಜಕಾರಣಿಯೂ ಆಗಿದ್ದಾನೆ. ತನ್ನ ರಾಜಕೀಯ ಕುಟಿಲ ನೀತಿಗಳನ್ನು ರಾಜಾರೋಷವಾಗಿ ಖಂಡಿಸುವ ಬಂಗಾಲದ ಶೇಖ ಇಮಾಮುದ್ದೀನರು ಹಾಗೂ ಚದುರಂಗದಾಟದ ಮಿತ್ರ ಆಯಿನೇ ಉಲ್ಮುಲ್ಕ, ಇಬ್ಬರೂ ವೈರಿಗಳೇ. ಅವರಿಬ್ಬರ ಉಪಟಳವನ್ನು ಪರಿಹರಿಸುವ ಕುಟಿಲ ಉಪಾಯವನ್ನು ಚದುರಂಗದಾಟದ ಮೂಲಕ ಕಂಡುಕೊಂಡಿದ್ದಾನೆ. ಮುಹಮ್ಮದ ಮಲತಾಯಿಗೆ, "ನಾನು ಈಗಲಷ್ಟೇ ಚದುರಂಗ-ಶಾಸ್ತ್ರದಲ್ಲಿಯ ಸುಪ್ರಸಿದ್ಧ ಸಮಸ್ಯೆಯೊಂದನ್ನು ಬಿಡಿಸಿದ್ದೇನೆ, ಅಲ-ಅದ್ಲಿ, ಅಸ್ಸರಾಭಿಯಂಥವರಿಗೂ ಒಗ್ಗದ ಸಮಸ್ಯೆ ಎಷ್ಟು ಸುಲಭವಾಗಿದೆ ಮತ್ತೆ" ಎಂದು ಹೇಳುತ್ತಾನೆ. ನಾಟಕದಲ್ಲಿ ಈ ಚದುರಂಗದಾಟವೆಂಬುದು ಕೇವಲ ಚದುರಂಗವಾಗಿರದೇ ಅದು ರಾಜಕೀಯ ಆಟವನ್ನು ಸಂಕೇತಿಸುತ್ತದೆ. "ಪೂರ್ತಿ ನಾಟಕದ ರಚನೆಯೇ ಚದುರಂಗದಾಟದ ನಿಯಮಗಳನ್ನು ಜಟಿಲತೆಯನ್ನು ಪ್ರತಿಬಿಂಬಿಸುತ್ತದೆ" ಎಂದು ನ. ರತ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮುಹಮ್ಮದನ ರಾಜಕೀಯ ಕುಟಿಲ ನೀತಿ ಈಗ ಕೆಲಸಮಾಡಲು ಶುರು ಮಾಡುತ್ತದೆ. ಶ್ರೇಷ್ಠ ಧಾರ್ಮಿಕ ಸಂತರಾದ ಶೇಖ ಇಮಾಮುದ್ದೀನರೂ ಅಂದು ಸಂಜೆ ಪ್ರಾರ್ಥನೆಯ ನಂತರ ಹಿರಿಯ ಮಸೀದೆ ಎದುರಿಗಿರುವ ಆವರಣದಲ್ಲಿ ದೊಡ್ಡ ಸಭೆಯನ್ನುದ್ದೇಶಿಸಿ ಮಾತನಾಡುವರೆಂದು ಅವರು ಸುಲ್ತಾನರ ಆಡಳಿತದ ವಿವೇಚನೆ ಮಾಡುವರೆಂದೂ, ಅವರಿಂದ ಆಡಳಿತಾತ್ಮಕ ಮಾರ್ಗದರ್ಶನ

ಪಡೆಯಲು ಸ್ವತಃ ಸುಲ್ತಾನರೇ ಆ ಸಭೆಗೆ ಆಗಮಿಸುವರೆಂದೂ, ದಿಲ್ಲಿಯ ನಾಗರಿಕರೆಲ್ಲ ಸಭೆಗೆ ಬರಬೇಕೆಂದು ಡಂಗುರ ಸಾರಿಸುತ್ತಾನೆ. ಆದರೆ ಒಳಒಳಗೆ ಸುಲ್ತಾನ ತನ್ನ ಸೈನಿಕರಿಗೆ ಆಜ್ಞಾಪಿಸಿ ಶೇಕ–ಇಮಾಮುದ್ದೀನರ ಭಾಷಣಕ್ಕೆ ಯಾರೂ ಬರದಂತೆ ತಡೆಯೊಡ್ಡುತ್ತಾನೆ. ಅನೇಕ ಧರ್ಮ ಗುರುಗಳನ್ನು ಸುಲ್ತಾನರು ಸೆರೆಮನೆಗೆ ಅಟ್ಟಿದ ಬಗ್ಗೆ ಶೇಖರು ಪ್ರಶ್ನಿಸುತ್ತಾರೆ. ಧರ್ಮ ಮತ್ತು ರಾಜಕಾರಣಗಳು ಪ್ರತ್ಯೇಕವಾಗಿಯೇ ಇರಬೇಕೆಂದು ಬಯಸುತ್ತಾನೆ ಸುಲ್ತಾನ. ತನ್ನ ಜೀವನದಲ್ಲಿ ಧರ್ಮದಿಂದಲೇ ಬೆಳಕು ಎಂದರೂ, ಒಬ್ಬ ಅರಸನಾಗಿ ಧರ್ಮದ ನಿರ್ಬಂಧಗಳು ಬೇಡವಾಗಿವೆ. ಹಲವಾರು ವೈರುಧ್ಯಗಳನ್ನು ಶ್ರೇಷ್ಠಧರ್ಮಗಳು ಹೊಂದಿದ್ದರೂ ಅವುಗಳು ಸಾರಿದ ಪರಮಸತ್ಯಗಳನ್ನು ಒಪ್ಪಿಕೊಳ್ಳುತ್ತೇನೆನ್ನುತ್ತಾನೆ, ಸುಲ್ತಾನ.

ಅವಧದ ಆಯಿನೇ ಉಲ್ಮುಲ್ಕ ದೆಹಲಿಯ ಮೇಲೆ ದಾಳಿ ಮಾಡಲು ಬರುತ್ತಿದ್ದಾನೆಂದೂ, ಈ ರಕ್ತಪಾತ ತಪ್ಪಿಸುವಲ್ಲಿ ಸಹಾಯಮಾಡಬೇಕೆಂದೂ ಸುಲ್ತಾನ ಶೇಖರನ್ನು ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಾನೆ. ಯುದ್ಧವಾದರೆ ಮುಸಲ್ಮಾನರ ಕೈಯಲ್ಲೇ ಮುಸಲ್ಮಾನರ ಕೊಲೆಯಾಗುತ್ತದೆ. ಇದನ್ನು ತಪ್ಪಿಸುವಗೋಸ್ಕರ ಶೇಖರು ಶಾಂತಿದೂತರಾಗಿ ಆಯಿನೇ ಉಲ್ಮುಲ್ಕನ ಹತ್ತಿರ ಹೋಗಬೇಕೆಂದು ಪ್ರಾರ್ಥಿಸುತ್ತಾನೆ. ಶೇಖರು ಈ ವಿನಂತಿಯನ್ನು ಒಪ್ಪಿಕೊಂಡ ನಂತರ ರಾಜವಸ್ತ್ರಗಳನ್ನು ತರಿಸಿ, ಸುಲ್ತಾನನೇ ಶೇಖರಿಗೆ ತೊಡಿಸಿ, ಅವರ ತಲೆಯ ಮೇಲೆ ಹೊಸ ಮುಂಡಾಸವನ್ನಿಟ್ಟು ಅವರನ್ನು ಶಾಂತಿ ಪ್ರಕ್ರಿಯೆಗೆ ಸಿದ್ಧಪಡಿಸಿ ಕಳುಹಿಸಿಕೊಡುತ್ತಾನೆ. ಮುಂದೆ ಆಯಿನೇ ಉಲ್ಮುಲ್ಕನನ್ನು ಸಂಧಾನಕ್ಕೊಪ್ಪಿಸಲು ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾದವೆಂದೂ, ಯುದ್ಧದಲ್ಲಿ ಆಯಿನೇ ಉಲ್ಮುಲ್ಕ ಸೋತು ಬಂಧಿಯಾದನೆಂದೂ, ಈ ಯಶಸ್ಸಿಗಾಗಿ ರಿಯ ಮಸೀದೆಯಲ್ಲಿ ಎಲ್ಲ ನಿಷ್ಠಾವಂತ ಮುಸಲ್ಮಾನರು ಪ್ರಾರ್ಥನೆ ಸಲ್ಲಿಸಬೇಕೆಂದು ಡಂಗುರ ಸಾರಿಸಲಾಗುತ್ತದೆ. ಸುಲ್ತಾನನು ನಜೀಬನಿಗೆ, ಶಾಂತಿದೂತರಾಗಿ ಹೋಗಿದ್ದ ಶೇಖ ಇಮಾಮುದ್ದೀನರು ಈ ಯುದ್ಧದಲ್ಲಿ ಸ್ವರ್ಗವಾಸಿಗಳಾದ್ದರಿಂದ ಅವರ ಮರಣಕ್ಕಾಗಿ ದಿಲ್ಲಿಯಲ್ಲಿ ಶೋಕ ದಿನವನ್ನು ಆಚರಿಸಬೇಕೆಂದೂ, ಯಾವ ವಿಜಯೋತ್ಸವ ಬೇಡವೆಂದು ಡಂಗುರ ಸಾರಿಸಬೇಕೆಂದು ಹೇಳುತ್ತಾನೆ. ನಂತರ ರತನಸಿಂಹ ಶಿಹಾಬುದ್ದೀನನಿಗೆ

ಮೋಸದಿಂದ ಹೇಗೆ ಶೇಕ ಇಮಾಮುದ್ದೀನರ ಕೊಲೆಯಾಯಿತೆಂದು ವಿವರಿಸುತ್ತಾನೆ. ಹೀಗೆ ಸುಲ್ತಾನ ಒಂದೇ ಕಲ್ಲೇಟಿಗೆ ಎರಡು ಹಕ್ಕಿಗಳನ್ನು ಹೊಡೆದು ಸಮಸ್ಯೆಗಳನ್ನು ನಿವಾರಿಸಿಕೊಂಡದ್ದಕ್ಕಾಗಿ ಒಳಒಳಗೆ ಸಂತಸಪಡುತ್ತಾನೆ.

ಸುಲ್ತಾನನ ಈ ಕುಕೃತ್ಯದ, ವಾಸನೆ ಗ್ರಹಿಸಿದ ದೆಹಲಿಯ ಎಲ್ಲ ಅಮೀರರು, ಶೇಖರು, ಸೈಯದರು ಕೂಡಿಕೊಂಡು ಶಿಹಾಬುದ್ದೀನನ ನೇತೃತ್ವದಲ್ಲಿ ಸುಲ್ತಾನನ್ನು ಪ್ರಾರ್ಥನಾ (ನಮಾಜ) ಸಮಯದಲ್ಲಿ ಕೊಲೆಗೈಯ್ಯಲು ಸಂಚು ಹೂಡುತ್ತಾರೆ. ರತನಸಿಂಹ ಈ ಪಿತೂರಿಯ ಬಗ್ಗೆ ಸುಲ್ತಾನನಿಗೆ ಅರುಹುತ್ತಾನೆ. ಪ್ರಾರ್ಥನಾ ಸಮಯದಲ್ಲಿ ಕೆಲವು ಹಿಂದು ಸೈನಿಕರನ್ನು ತನ್ನ ರಕ್ಷಣೆಗಾಗಿ ಸುಲ್ತಾನನು ನಿಲ್ಲಿಸಿ ಈ ಸಂಚನ್ನು ವಿಫಲಗೊಳಿಸುತ್ತಾನೆ. ಈ ಸಂಚಿನ ಮುಖ್ಯ ರೂವಾರಿಯಾಗಿದ್ದ ಶಿಹಾಬುದ್ದೀನನನ್ನು ಕರುಣೆ ಇಲ್ಲದೇ ಅನೇಕೆ ಬಾರಿ ಖಡ್ಗದಿಂದ ಇರಿದು ಹತ್ಯೆಗೈಯುತ್ತಾನೆ. ಈ ಸಂಚಿನಲ್ಲಿ ಭಾಗಿಯಾದ ಎಲ್ಲರನ್ನೂ ಹಾಗೂ ರಕ್ಷಣೆ ಮಾಡಿದ್ದ ಹಿಂದೂ ಸೈನಿಕರನ್ನೂ ನೇಣಿಗೇರಿಸಲು ಆಜ್ಞಾಪಿಸುತ್ತಾನೆ. ಪ್ರಾರ್ಥನೆಯ ವೇಳೆ ಸುಲ್ತಾನನನ್ನು ಕೊಲ್ಲಲು ಕೆಲವು ಅಮೀರರು ಪ್ರಯತ್ನಿಸಿದರೆಂದೂ ಶಿಹಾಬುದ್ದೀನನು ಶೌರ್ಯದಿಂದ ಹೋರಾಡಿ ಸುಲ್ತಾನರ ಪ್ರಾಣವನ್ನು ಕಾಪಾಡಿ ವೀರ ಮರಣವನ್ನಪ್ಪಿದನೆಂದು ಡಂಗುರ ಸಾರಿಸಬೇಕೆಂದೂ, ಅವನ ಸ್ವಾಮಿನಿಷ್ಠೆ ತಕ್ಕಂತೆ ದಿಲ್ಲಿಯಲ್ಲೇ ಅವನ ಶವಸಂಸ್ಕಾರ ಮಾಡಿ ಅದಕ್ಕೆ ಅವನ ತಂದೆಯನ್ನು ಆಹ್ವಾನಿಸಿ ಸತ್ಕರಿಸಬೇಕೆಂದು ಸುಲ್ತಾನ ಆಜ್ಞಾಪಿಸುತ್ತಾನೆ. ಇಲ್ಲಿಯೂ ಕೂಡ ಸುಲ್ತಾನನ ಕುಟಿಲ ರಾಜಕೀಯ ನೀತಿ ಎದ್ದು ಕಾಣುತ್ತದೆ. ಸುಲ್ತಾನನು ಶಿಹಾಬುದ್ದೀನನನ್ನು ಕೊಲ್ಲುವ ಮುನ್ನ ಪ್ರಾರ್ಥನಾ ವೇಳೆಯ ಮುನ್ನ ನಡೆದ ಸಭೆಯಲ್ಲಿ ಎಲ್ಲ ಅಮೀರರನ್ನು ಈ ರೀತಿ ಪ್ರಶ್ನಿಸುತ್ತಾನೆ. "...... ಕೇವಲ ಅರಸನ ಮಗನಾದ ಮಾತ್ರಕ್ಕೆ ನಾನು ಅರಸನೆನಿಸಿಕೊಳ್ಳಬಹುದೇ? ಕೇವಲ ಪ್ರಜೆಗಳು, ಸೈನಿಕರು ನನ್ನ ಮಾತಿಗೆ ತಲೆದೂಗುತ್ತಾರೆಂದ ಮಾತ್ರಕ್ಕೆ ಅರಸನೆನಿಸಿಕೊಳ್ಳಬಹುದೇ? ನನ್ನ ಆತ್ಮ ವಿಶ್ವಾಸವೊಂದೇ ಸಾಕೇ? ನೀವೇ ಹೇಳಿ ಅಮೀರರೇ ನಿಮ್ಮ ದೃಷ್ಟಿಯಲ್ಲಿ ನಾನು ಅರಸನಾಗಲಿಕ್ಕೆ ನಾನೇನು ಮಾಡಬೇಕು?" ಈ ಮಾತುಗಳು ಭಾರತದ ಪ್ರಸ್ತುತ ವಂಶಪಾರಂಪರ್ಯ ರಾಜಕಾರಣಕ್ಕೆ ಕನ್ನಡಿ ಹಿಡಿದಿದೆ, ಎಂದು ಅನೇಕ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

Scanned with OKEN Scanner

ಮುಹಮ್ಮದನ ವಿಚಾರದಂತೆ ರಾಜಧಾನಿಯು ದೆಹಲಿಯಿಂದ ದೌಲತಾಬಾದಿಗೆ ಸ್ಥಳಾಂತರಗೊಳ್ಳುತ್ತದೆ. ಇದು ಸಾವಿರಾರು ಅಮಾಯಕ ಜನರ ಸಾವುನೋವುಗಳಿಗೆ ನಾಂದಿಯಾಗುತ್ತದೆ. ಬಲಪ್ರಯೋಗದಿಂದ ಮಾಡಿದ ರಾಜಧಾನಿ ಬದಲಾವಣೆ ಹೇಳತೀರದ ಜನರ ಬವಣೆಗಳಿಗೆ ಕಾರಣವಾಗಿ ಸುಲ್ತಾನರ ಪರಿಹಾರ ಕ್ರಮಗಳನ್ನು ದುರುಪಯೋಗಪಡಿಸಿಕೊಂಡ ಅಝೀಝು ಮತ್ತು ಆಝಂ ಸ್ವತಂತ್ರ ಭಾರತದ ಭ್ರಷ್ಟ ಅಧಿಕಾರಿ ಶಾಹಿ ವರ್ಗವನ್ನು ಪ್ರತಿನಿಧಿಸುತ್ತಾರೆ. ಮುಹಮ್ಮದನ ಮಲತಾಯಿ ಆತನ ಮೇಲೆ ವಜೀರ ನಜೀಬನ ಪ್ರಭಾವ ಹೆಚ್ಚಾಯಿತೆಂದು ಆತನನ್ನು ವಿಷವಿಕ್ಕಿಸಿ ಕೊಲೆ ಮಾಡಿಸುತ್ತಾಳೆ. ಈ ವಿಷಯ ತಿಳಿದ ಮುಹಮ್ಮದ ತನ್ನ ಮಲತಾಯಿಗೆ ನಡುರಸ್ತೆಯಲ್ಲಿ ಕಂಬಕ್ಕೆ ಕಟ್ಟಿ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ ವಿಧಿಸುತ್ತಾನೆ. ಈಗ ನಾಟಕದಲ್ಲಿ ಸಂಪ್ರದಾಯಿಕತೆ ಮತ್ತು ಆಧುನಿಕತೆಯ ವಿಚಾರಗಳ ಸಂಘರ್ಷ ತಾರಕಕ್ಕೇರಿ ಒಂದು ಹಂತ ತಲುಪುತ್ತವೆ. ಮುಹಮ್ಮದನ ಇನ್ನೊಂದು ಆಧುನಿಕ ಆರ್ಥಿಕ ವಿಚಾರ ಬೆಳ್ಳಿಯ ನಾಣ್ಯಗಳ ಜೊತೆ ತಾಮ್ರದ ನಾಣ್ಯಗಳ ಚಲಾವಣೆಯೂ ಕೂಡಾ ಲಂಚಬುಡುಕ ಅಧಿಕಾರಿಗಳ, ಜನರ ನಿರ್ಲಕ್ಷ್ಯ ಹಾಗೂ ಅಸಹಕಾರದಿಂದ ಸಂಪೂರ್ಣ ವೈಫಲ್ಯ ಕಾಣುತ್ತದೆ. ಈ ಸಂದರ್ಭದಲ್ಲಿ ಮುಹಮ್ಮದ, "ಇಡಿಯ ರಾಜ್ಯದಲ್ಲಿ ಉತ್ಕರ್ಷ ಬಂದಿದೆ, ಒಂದೇ ಒಂದು ಉದ್ಯೋಗಕ್ಕೆ ಪ್ರತಿಯೊಂದು ಹಿಂದೂ ಮನೆ ಸ್ವತಂತ್ರ ಟಂಕಸಾಲೆಯಾಗಿ ಬಿಟ್ಟಿದೆ. ..... ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ, ಒಂದು ಬೇನೆಯನ್ನು ನಿಲ್ಲಿಸಲಿಕ್ಕೆ ಹೋದರೆ ಇನ್ನೊಂದು ಬೇನೆ ಬಲಿಯುತ್ತದೆ" ಎಂದು ಪರಿತಪಿಸುತ್ತಾನೆ.

ಕಾರ್ನಾಡರು ತುಘಲಕನ ಆಡಳಿತದಲ್ಲಿ ಭಾರತವನ್ನು ಬಾಧಿಸಿದ ಪ್ಲೇಗ ರೋಗ ಮತ್ತು ಬರಗಾಲದ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ನಾಟಕದ ಹನ್ನೊಂದನೆಯ ದೃಶ್ಯದಲ್ಲಿ ಮೂರನೆಯ ವ್ಯಕ್ತಿಯ ಮಾತುಗಳಲ್ಲಿ ಬರಗಾಲದ ಭೀಕರತೆ ಹೀಗೆ ವ್ಯಕ್ತವಾಗಿದೆ. "ದಾರಿಯಲ್ಲೆಲ್ಲ ಹೆಣಗಳು ಸಾಲಂತೆ, ನನ್ನ ತಮ್ಮನ ಕಣ್ಣೆದುರಿನಲ್ಲೇ ಒಬ್ಬ ಮನುಷ್ಯ ವಿಲವಿಲ ಒದ್ದಾಡಿ ಸತ್ತನಂತೆ, ...... ಮೋಅಬನಲ್ಲಂತೂ ಜನರು ಗಿಡದ ತೊಗಟೆಯನ್ನು ಹರಿದು ತಿನ್ನುತ್ತಾರಂತೆ ನನ್ನ ತಮ್ಮ ಹೇಳುತ್ತಾನೆ. ಹೊಟ್ಟೆಗಿಲ್ಲದೆ ಸತ್ತ ಕುದುರೆಗಳ ಚರ್ಮವನ್ನು ಹೆಂಗಸರು ತಿನ್ನುತ್ತಾರಂತೆ."

ಇಂಥಹ ಒಂದು ಗೊಂದಲಕಾರಿ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿ, ಮುಹಮ್ಮದ ಬಗದಾದಿನ ಕೊನೆಯ ಖಲೀಫರಾದ ಅಬ್ಬಾಸಿದ್-ಅಲ್-ಮುಸ್ತಾನಸೀರರ ವಂಶಸ್ತರಾದ ಘಿಯಾಸುದ್ದೀನ್ ಅಬ್ಬಾಸಿದ್ ಅವರನ್ನು ಆಮಂತ್ರಿಸುತ್ತಾನೆ. ಖಲೀಫರ ವಂಶದವರ ಪಾದ ಸ್ಪರ್ಶದಿಂದ ತನ್ನ ಪಾಪದ ಭೂಮಿಯನ್ನು ಪುನೀತಗೊಳಿಸಿಕೊಳ್ಳಲು ಹಾಗೂ ಅವರ ಆಶೀರ್ವಾದ ಪಡೆದು ತನ್ನ ಅಧಿಕಾರವನ್ನು ಅರಗಿಸಿಕೊಳ್ಳುವ ಸಮಾಧಾನ ತನಗೆ ದೊರೆಯಬಹುದೆಂದು ಭಾವಿಸಿದ್ದಾನೆ. ಅವರು ಬಂದನಂತರ ನಿಂತುಹೋದ ಬಹಿರಂಗ ಪ್ರಾರ್ಥನೆಯನ್ನು ಮತ್ತೆ ತನ್ನ ರಾಜ್ಯದಲ್ಲಿ ಪ್ರಾರಂಭಿಸುವುದಾಗಿ ನಿರ್ಧರಿಸಿದ್ದಾನೆ. ಇಸ್ಲಾಂ ಧರ್ಮದಲ್ಲಿ ಪ್ರಾರ್ಥನೆಗೆ (ನಮಾಜಿಗೆ) ಬಹಳಷ್ಟು ಮೌಲ್ಯವಿದೆ. ಮನುಷ್ಯನ ಮನಸ್ಸನ್ನು ಕಲ್ಮಶ ವಿಚಾರಗಳಿಂದ ದೂರವಿಟ್ಟು, ಅಂತರಂಗ ಹಾಗೂ ಬಹಿರಂಗ ಶುದ್ಧಿಮಾಡಿಕೊಳ್ಳುವ ಅಧ್ಯಾತ್ಮಿಕ ಸಾಧನವಾಗಿದೆ. ವಿಚಿತ್ರವೆಂದರೆ, ಸುಲ್ತಾನನು ತನ್ನ ತಂದೆಯನ್ನು ಹಾಗೂ ತಮ್ಮನನ್ನೂ ಕೊಲೆ ಮಾಡಿಸಿದ್ದು ಈ ಪವಿತ್ರ ಪ್ರಾರ್ಥನಾ (ನಮಾಜ) ವೇಳೆಯಲ್ಲಿಯೇ, ತನ್ನ ಸಾಮ್ರಾಜ್ಯದಲ್ಲಿ ಪ್ರತಿಯೊಬ್ಬ ಮುಸಲ್ಮಾನನು ದಿನಕ್ಕೆ ಐದು ಸಲ ಪ್ರಾರ್ಥನೆ (ನಮಾಜ) ಮಾಡಬೇಕೆಂದು ಆಜ್ಞಾಪಿಸಿದವನು ಸುಲ್ತಾನನೇ, ದೆಹಲಿಯ ಅಮೀರರು, ಧಾರ್ಮಿಕ ಮುಖಂಡರು ಶಿಹಾಬುದ್ದೀನನ ನೇತೃತ್ವದಲ್ಲಿ ಸುಲ್ತಾನನ ಕೊಲೆಗೆ ಯತ್ನಿಸಿದ್ದು ಈ ಪ್ರಾರ್ಥನಾ (ನಮಾಜ) ವೇಳೆಯಲ್ಲಿಯೇ. ಈ ಪ್ರಾರ್ಥನಾ ವೇಳೆಯಲ್ಲಿ ಆಗುವ ಅನಾಹುತಗಳಿಗೆ ರೋಸಿಹೋಗಿ, ಸರ್ವಶಕ್ತನಾದ ಮತ್ತು ದಯಾಪರನಾದ ಆ ಅಲ್ಲಾಹುಗೆ ಪ್ರಾರ್ಥನೆ ಸಲ್ಲಿಸುವ ಯೋಗ್ಯತೆ ಈ ಕ್ಷುಲ್ಲಕ ಬುದ್ಧಿಯ ನರಮಾನವರಿಗೆ ಇಲ್ಲವೆಂದು ತಿಳಿದು ಪ್ರಾರ್ಥನೆಯನ್ನು ರದ್ದುಗೊಳಿಸಿದವನು ಈ ಸುಲ್ತಾನನೇ. ಮತ್ತೆ ರಾಜ್ಯದಲ್ಲಿ ಪ್ರಾರ್ಥನೆಯನ್ನು ಘಿಯಾಸುದ್ದೀನ್ ಅಬ್ಬಾಸಿದ್ ಅವರ ಆಗಮನದಿಂದಲೇ ಮತ್ತೆ ಪ್ರಾರಂಭಿಸಿದ್ದು ಈ ಸುಲ್ತಾನನೇ. ಖಲೀಫನ ಪ್ರತಿನಿಧಿ ಪ್ರಾರಂಭಿಸಬೇಕಾಗಿದ್ದ ಪ್ರಾರ್ಥನೆ ಒಂದು ರಾಜಕೀಯ ಅವಶ್ಯಕತೆಯಾಗಿತ್ತೇ ವಿನಃ ಧಾರ್ಮಿಕ ಪ್ರಕ್ರಿಯೆಯಾಗಿರಲಿಲ್ಲ. ಹೀಗೆ ತುಘಲಕನಿಗೂ ಮತ್ತು ಧರ್ಮಕ್ಕೂ ಇದ್ದ ಸಂಬಂಧ ಅಷ್ಟಕಷ್ಟೇ. ಹೀಗೆ ಸುಲ್ತಾನ ಹಾಗೂ ಆತನ ವೈರಿಗಳು ಇಸ್ಲಾಂಧರ್ಮದ ಸಾಂಪ್ರದಾಯಿಕ ನಿಯಮವಾದ ಪ್ರಾರ್ಥನೆಯನ್ನು ತಮ್ಮ ಸ್ವಂತ ರಾಜಕೀಯ ಹಿತಾಸಕ್ತಿಗಳಿಗಾಗಿ ಒಂದು ತಂತ್ರವಾಗಿ ಬಳಸಿಕೊಂಡದ್ದು ವಿಪರ್ಯಾಸವೇ

Scanned with OKEN Scanner

ಸರಿ. ಅಝೀಝು ಮತ್ತು ಆಝಂ ಪಾತ್ರಗಳು ಉಪಕಥಾನಕದಲ್ಲಿ ಬಳಕೆಯಾಗಿ, ಮುಖ್ಯ ಕಥಾನಕದೊಂದಿಗೆ ಬೆಸುಗೆಯಾಗಿ ಸಮಾನಾಂತರವಾಗಿ ಸಾಗುತ್ತ ಪ್ರೇಕ್ಷಕರಲ್ಲಿ ಹಾಸ್ಯದ ಹೊನಲು ಹರಿಸುವಲ್ಲಿ ಯಶಸ್ವಿಯಾಗುತ್ತವೆ. ಈ ಅಝೀಝು ಒಬ್ಬ ಮುಸ್ಲಿಂ ಅಗಸನಾಗಿದ್ದು ನಾಟಕದ ಪ್ರಾರಂಭದಲ್ಲಿ ವಿಷ್ಣು ಪ್ರಸಾದನೆಂಬ ಬ್ರಾಹ್ಮಣನ ವೇಷ ಧರಿಸಿ ಸುಲ್ತಾನನನ್ನೇ ಮೋಸಗೊಳಿಸಿದ್ದಾನೆ. ಸುಲ್ತಾನನ ಅಧಿಕಾರಿಯಾಗಿ, ಸಾರ್ವಜನಿಕರನ್ನು ಸುಲಿಗೆ ಮಾಡಿ ಶ್ರೀಮಂತನಾಗಿದ್ದಾನೆ. ಈಗ ಈ ವೃತ್ತಿ ಅವನಿಗೆ ಬೇಡವಾಗಿದೆ. ಅವನಿಗೆ ಅರಸನಂಥ ಅಧಿಕಾರ ಬೇಕಾಗಿದೆ. ಖಲೀಫರ ವಂಶಸ್ಥರಾದ ಘಿಯಾಸುದ್ದೀನ್ ಅಬ್ಬಾಸಿದ್ ಅವನನ್ನು ಈ ದುಷ್ಟ ಅಝೀಝು ದಾರಿಯಲ್ಲಿ ಕೊಲೆಮಾಡಿ ಅವನ ವೇಷ ಭೂಷಣಗಳನ್ನು ಧರಿಸಿ ತಾನೇ ಘಿಯಾಸುದ್ದೀನ ಅಬ್ಬಾಸಿದ್ ಎಂದು ಸುಲ್ತಾನನ್ನು ನಂಬಿಸಿ ಅರಮನೆ ಪ್ರವೇಶಿಸುತ್ತಾನೆ. ಅಝೀಝುನ ನಿಜಬಣ್ಣ ಕೊನೆಗೂ ಆತನಿಂದ ಪೀಡನೆಗೊಳಗಾದ, ತನ್ನ ಗಂಡು ಕೂಸನ್ನು ಕಳೆದುಕೊಂಡ ಒಬ್ಬ ಹೆಣ್ಣು ಮಗಳಿಂದ ಬಯಲಾಗುತ್ತದೆ. ಆದರೆ ಸುಲ್ತಾನನು ಅವನು ಮಾಡಿದ ಘೋರ ತಪ್ಪಿಗೆ ಶಿಕ್ಷಿಸದೇ ಅವನನ್ನು ಒಬ್ಬ ಪ್ರಾಂತಾಧಿಕಾರಿಯನ್ನಾಗಿ ನಿಯಮಿಸುತ್ತಾನೆ. ಇತಿಹಾಸಕಾರ ಭರನಿಗೆ ಇದು ಸುತಾರಾಂ ಇಷ್ಟವಾಗುವುದಿಲ್ಲ. ಅಝೀಝು ಮತ್ತು ಆಝಂ ಪಾತ್ರಗಳು ವಸಾಹತೋತ್ತರ ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಲಂಚಕೋರ ಅಧಿಕಾರಶಾಹಿ ವರ್ಗವನ್ನು ಪ್ರತಿನಿಧಿಸುತ್ತಾರೆ. ಹೀಗೆ ನಾಟಕವು ತುಘಲಕ್‌ನ ಆಧುನಿಕ ಪರಿಕಲ್ಪನೆಗಳಾದ, ಜಾತ್ಯಾತೀತತೆ, ಸಮಾನತೆ, ಸೋದರತ್ವ, ಸಾಮಾಜಿಕ ನ್ಯಾಯ ಮುಂತಾದವುಗಳು ಆತನ ರಾಜ್ಯಾಧಿಕಾರವನ್ನು ಗಟ್ಟಿಗೊಳಿಸುವಗೋಸ್ಕರ ರಾಜಕೀಯ ಕೈಕೊಂಡ ಕುಟೀಲ ನೀತಿಗಳಿಗೆ ದುರ್ಬಳಕೆಯಾಗಿರುವದನ್ನು ತೋರಿಸುತ್ತದೆ. ಇದೂ ಅಲ್ಲದೇ ಈ ನಾಟಕವು ತುಘಲಕ್‌ನ ಕಾಲಘಟ್ಟದ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುತ್ತದೆ, ಗತಕಾಲದ ಇತಿಹಾಸವನ್ನು ವರ್ತಮಾನಕಾಲದ ಭಾರತದ ಸ್ಥಿತಿಗತಿಗಳೊಂದಿಗೆ ಸಮ್ಮಿಳಿಸಿ ಹೇಳಿದ ಹೃದಯವಿದ್ರಾವಕ ವೈಚಾರಿಕ ಕಥಾನಕವಾಗಿದೆ.

ಇನ್ನು ನಾಟಕದ ತಂತ್ರಗಾರಿಕೆಯ ವಿಷಯಕ್ಕೆ ಬಂದಾಗ ಭಾರತೀಯ ಸಾಂಪ್ರದಾಯಿಕ ಜಾನಪದ ರಂಗಭೂಮಿಯ ಹಾಗೂ ಆಧುನಿಕ ಪಾಶ್ಚಿಮಾತ್ಯ ನಾಟ್ಯ ರಂಗತಂತ್ರಗಳನ್ನು ಈ ನಾಟಕದಲ್ಲಿಯೂ ಕೂಡಾ ಕಾರ್ನಾಡರು

ಯತೇಚ್ಛವಾಗಿ ಬಳಸಿದ್ದಾರೆ. ವೃತ್ತಿರಂಗಭೂಮಿಯ ನಾಟಕಗಳ ಉಪಕಥಾನಕಗಳಲ್ಲಿ ಹಾಸ್ಯಪಾತ್ರಗಳ ಬಳಕೆಯಾದಂತೆ, ಅಝೀಝ ಮತ್ತು ಆಝಂ ಪಾತ್ರಗಳ ಸೃಷ್ಟಿ ಮುಖ್ಯ ಕಥಾನಕದದೊಂದಿಗಿನ ಅವುಗಳ ಮನೋಜ್ಞವಾದ ಸಂಬಂಧದ ನಾಟ್ಯೀಕರಣ, ನಾಟಕಕಾರರ ಪ್ರತಿಭೆಗೆ ಕನ್ನಡಿ ಹಿಡಿದಿದೆ. ಅಫಲಾತೂನ, ಜಲಾಲುದ್ದೀನ ರೂಮಿಯ ಕಾವ್ಯವನ್ನು ಓದಿ ಹುಚ್ಚೆದ್ದು ಕುಣಿದು, ಅವರು ಹೇಳಿದ ಆದರ್ಶವನ್ನು ವಾಸ್ತವಿಕ್ಕಿಳಿಸಬೇಕೆಂಬ ಹುಚ್ಚು ಒಂದು ಕಡೆಯಾದರೆ, ತಾನು ಸಂಶಯಿಸಿದವರನ್ನು ತುಘಲಕ್ ನಿರ್ದಯವಾಗಿ ಕೊಲ್ಲುತ್ತ ಸಾಗುತ್ತಾನೆ. ನಾಟಕದ ಕಥಾನಕ ಅನೇಕ ವಿರೋಧಾಬಾಸಗಳ ಮೇಲೆ ಹೆಣೆಯಲ್ಪಟ್ಟಿದೆ. ಈ ಸಂದರ್ಭದಲ್ಲಿ ಯು. ಆರ್. ಅನಂತಮೂರ್ತಿಯವರು "ತುಘಲಕ್ ಹಾಗೂ ಆತನ ವೈರಿಗಳು ಪ್ರಾರಂಭದಲ್ಲಿ ಆದರ್ಶವಾದಿಯಾಗಿಯೇ ಕಾಣಿಸುತ್ತಾರೆ. ಈ ಆದರ್ಶಗಳ ಬೆನ್ನುಹತ್ತಿ, ಪ್ರಜೆಗಳ ದಿನನಿತ್ಯದ ವಾಸ್ತವಕ್ಕೆ ಕುರುಡಾಗಿ ವರ್ತಿಸುತ್ತಾರೆ. ಪದೇ ಪದೇ ಎದುರಿಸಬೇಕಾದ ಹಿನ್ನೆಡೆಗಳಿಂದ ಬೇಸತ್ತು ಅವರು ಹಿಂಸೆ - ಕ್ರೌರ್ಯಗಳ ಮೂಲಕವಾಗಿಯೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಹುಡುಕತೊಡಗುತ್ತಾರೆ. ನಾಟಕವು ಆದರ್ಶ ಮತ್ತು ವಾಸ್ತವಿಕತೆ ಹಾಗೂ ಆದರ್ಶ ಮತ್ತು ಹಿಂಸೆ ಎಂಬ ವಿರೋಧಾಬಾಸಗಳ ಮೇಲೆ ಹೆಣೆಯಲ್ಪಟ್ಟಿದೆ" ಎಂದು ಉಲ್ಲೇಖಿಸಿರುವುದು ಉಚಿತವೆನಿಸುತ್ತದೆ.

ನಾಟಕದಲ್ಲಿ ಚದುರಂಗದಾಟ ಒಂದು ಸಂಕೇತವಾಗಿ ಬಳಸಲ್ಪಟ್ಟಿದೆ. ಇಲ್ಲಿ ಬಳಕೆಯಾಗಿರುವ ಪದಮುಂಜಗಳಾದ ರಾಜ, ಮಂತ್ರಿ, ಸೇನಾಧಿಪತಿ, ಆನೆ, ಕುದುರೆ, ಕಾಲಾಳು ಮುಂತಾದವು ರಾಜಪ್ರಭುತ್ವದ ರಾಜಕಾರಣದಿಂದ ಎರವಲು ಪಡೆದವುಗಳೇ ಆಗಿವೆ. ಈ ಆಟ ಯುದ್ಧ ತಂತ್ರದ ಹಾಗೂ ಬುದ್ಧಿಮತ್ತೆಗಳ ಸಮರ್ಥ ಸಂಕೇತ ರಾಜಕಾರಣವನ್ನು ಒಂದು ಆಟವೆಂದೇ ಪರಿಗಣಿಸುವ ಮುಹಮ್ಮದನಿಗೆ ಚದುರಂಗದಾಟವನ್ನು ತುಂಬಾ ಪ್ರೀತಿಸುವದು ಹಾಗೂ ಅದರಲ್ಲಿ ಪ್ರಾವಿಣ್ಯತೆ ಪಡೆದಿರುವದು ಸ್ವಾಭಾವಿಕವಾಗಿದೆ. ಈ ಆಟದ ಹುಚ್ಚು ಎಷ್ಟಿತ್ತೆಂದರೆ, ತನ್ನ ವಿರುದ್ಧ ದಂಡೆತ್ತಿ ಬಂದ ಆಯಿನೇ ಉಲ್ಮುಲ್ಕ ಬಂಧಿಯಾದಾಗಲೂ ಕೂಡಾ ತನ್ನ ಚದುರಂಗದಾಟದಲ್ಲಿ ತಪ್ಪು ತೋರಿಸಿದನೆಂದು ಅವನನ್ನು ಕ್ಷಮಿಸಿ, ಅವನ ರಾಜ್ಯವನ್ನು ಅವನಿಗೆ ಮರಳಿ ಒಪ್ಪಿಸುತ್ತಾನೆ. ಆದ್ದರಿಂದ ಈ ಆಟ

ನಾಟಕದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲೇ ನಾಟಕದ ಸಾಂಕೇತಿಕ ಅರ್ಥವನ್ನು ಹೆಚ್ಚಿಸುತ್ತ ಒಂದು ಮುಖ್ಯ ಬಾಗವಾಗಿ ಮುಂದುವರೆಯುತ್ತದೆ. ಚದುರಂಗದಾಟದಲ್ಲಿರುವಂತೆ ತಂತ್ರ-ಪ್ರತಿತಂತ್ರಗಳನ್ನು ನಾಟಕದಲ್ಲಿ ಬರುವ ಬಹುತೇಕ ಪಾತ್ರಗಳು ಹೆಣೆಯುತ್ತಲೇ ಹೋಗುತ್ತವೆ. ಉದಾಹರಣೆಗಾಗಿ ಅಝೀಝು ನಾಟಕದ ಕೊನೆಯ ಭಾಗದಲ್ಲಿ ಸುಲ್ತಾನನಿಗೆ ಸರಿಸಮಾನನಾಗಿ ನಿಂತು ಆತನಿಂದ ವಂದನೆ ಸ್ವೀಕರಿಸಿ, ಆತನನ್ನು ಪೇಚಿಗೆ ಸಿಕ್ಕಿಸುವ ರೀತಿ ಅದ್ಭುತವಾಗಿದೆ. ನಾಟಕದಲ್ಲಿ ಧರ್ಮ ಮತ್ತು ರಾಜಕಾರಣದ ಪ್ರತಿಧ್ವನಿ ಇದೆ. ಇಂದಿಗೂ ಕೂಡಾ ನಾವು ಸ್ವತಂತ್ರ ಭಾರತದಲ್ಲಿ ಧರ್ಮ ಮತ್ತು ರಾಜಕಾರಣ ಬೆಸೆದುಕೊಂಡಿರುವದನ್ನು ಕಾಣುತ್ತೇವೆ. ನಾಟಕದಲ್ಲಿ ಕಾರ್ನಾಡರು ಇನ್ನು ಅನೇಕ ಸಂಕೇತಗಳಾದ, ನಿದ್ರೆ, ಪ್ರಾರ್ಥನೆ, ದೇವರು, ಧರ್ಮ ಇತ್ಯಾದಿ ಬಳಸಿ ರಾಜಕಾರಣದ ವಾಸ್ತವಿಕ ಒಳಸತ್ಯಗಳನ್ನು ಅನಾವರಣಗೊಳಿಸಿದ್ದಾರೆ.

ಕಾರ್ನಾಡರು ನಾಟಕದಲ್ಲಿ ಸಾಂಪ್ರದಾಯಿಕ ಜಾನಪದ ಹಾಗೂ ಪಾಶ್ಚಿಮಾತ್ಯ ರಂಗತಂತ್ರಗಳಾದ ಪರದೆ, ವೇಷಬದಲಿಸುವಿಕೆ, ಮುಖವಾಡ, ಅಕರಾ-ಮಕರಾ ಮುಂತಾದವುಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಪಾತ್ರಗಳು ಪರಿಸ್ಥಿತಿಗೆ ಅನುಗುಣವಾಗಿ ಮುಖವಾಡ ಧರಿಸುವದು, ವೇಷ ಬದಲಿಸುವಿಕೆಯ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತವೆ. ಪಾತ್ರಗಳಾದ ಅಝೀಝು ಮತ್ತು ಆಝಂ ಜಾನಪದ ರಂಗತಂತ್ರದ ಅಕರಾ-ಮಕರಾ ಪಾತ್ರಗಳನ್ನು ಹೋಲುತ್ತವೆ. ಅಝೀಝು ಮೊದಲು ಬ್ರಾಹ್ಮಣ ವಿಷ್ಣುಪ್ರಸಾದನಾಗಿ ಕೊನೆಯಲ್ಲಿ ಘಿಯಾಸುದ್ದೀನ್ ಅಬ್ಬಾಸಿದ್‌ನಾಗಿ ವೇಷ ಬದಲಿಸಿ ಸುಲ್ತಾನನ್ನು ವಂಚಿಸುತ್ತಾನೆ. ಅಝೀಝು ಸುಲ್ತಾನನ ಕುಟೀಲ ನೀತಿಯ ಪ್ರತಿನಿಧಿಯಾದರೆ ಆಝಂ, ಸುಲ್ತಾನನ ಮಾನವೀಯ ಮುಖವನ್ನು ಪ್ರತಿನಿಧಿಸುತ್ತಾನೆ. ಮುಹಮ್ಮದನು ಕೂಡಾ ಅನೇಕ ಮುಖವಾಡಗಳನ್ನು ಧರಿಸುತ್ತಾನೆ. ಆದರ್ಶವಾದಿಯಾಗಿ & ಜಾತ್ಯಾತೀತ ವ್ಯಕ್ತಿಯಾಗಿ ಹಿಂದು ಮುಸ್ಲಿಂ ಏಕತೆಗಾಗಿ ಶ್ರಮಿಸುತ್ತಾನೆ, ಇಸ್ಲಾಂಧರ್ಮನಿಷ್ಠನಾಗಿ ಪ್ರಾರ್ಥನೆಯನ್ನು ಕಡ್ಡಾಯಗೊಳಿಸುತ್ತಾನೆ. ಕ್ಷಮಾಶೀಲನಾಗಿ ಅಝೀಝು ಮತ್ತು ಆಯಿನೇ ಉಲ್ಮುಲ್ಕರನ್ನು ಕ್ಷಮಿಸುತ್ತಾನೆ. ಕ್ರೂರನಾಗಿ – ಶಿಹಾಬುದ್ದೀನನನ್ನು ನಿರ್ದಯವಾಗಿ ಹತ್ಯೆ ಮಾಡುತ್ತಾನೆ. ತನ್ನ ಹತ್ಯೆಯ ಸಂಚಿನಲ್ಲಿ ಭಾಗವಹಿಸಿದ

Scanned with OKEN Scanner

ಎಲ್ಲ ಅಮೀರರನ್ನು, ಸೈನಿಕರನ್ನು ನೇಣುಗಂಬಕ್ಕೇರಿಸಲು ಆಜ್ಞಾಪಿಸುತ್ತಾನೆ ಮತ್ತು ನಜೀಬನನ್ನು ಕೊಲ್ಲಿಸಿದ ಮಲತಾಯಿಗೆ ನಡುರಸ್ತೆಯಲ್ಲಿ ಕಂಬಕ್ಕೆ ಕಟ್ಟಿ ಕಲ್ಲು ಹೊಡೆಸಿ ಸಾಯಿಸಲು ಆಜ್ಞಾಪಿಸುತ್ತಾನೆ. ಆತ್ಮಾವಲೋಕನ ಮಾಡಿಕೊಳ್ಳುವವನಾ ಜನರಿಂದ ಬಂದ ಹುಚ್ಚ ಮುಹಮ್ಮದ ಎಂಬ ಬಿರುದನ್ನು ಸ್ವೀಕರಿಸುತ್ತಾನೆ ಹೀಗೆ ಕಾರ್ನಾಡರು ರಂಗತಂತ್ರವಾದ ಮುಖವಾಡಗಳನ್ನು ವೇಷ ಬದಲಿಸುವಿಕೆಯನ್ನು ಇಂಗ್ಲೀಷ ಪ್ರಸಿದ್ಧ ನಾಟಕಕಾರ ಶೆಕ್ಷಪೀಯರನ ಹಾ ಯಶಸ್ವಿಯಾಗಿ ಉಪಯೋಗಿಸಿದ್ದಾರೆ. ಶೆಕ್ಷಪೀಯರನ ಹಾಸ್ಯ ಪಾತ್ರಗಳು ಮನರಂಜನೆಗೆ ಸೀಮಿತವಾಗಿದ್ದರೆ, ಕಾರ್ನಾಡರ ಹಾಸ್ಯಪಾತ್ರಗಳು (ಅಝೀಝ್ ಮತ್ತು ಆಝಂ) ಬ್ರಷ್ಟ ರಾಜಕೀಯ ವ್ಯವಸ್ಥೆಯನ್ನು ವಿಡಂಬಿಸುತ್ತವೆ.

ನಾಟಕವು ಐತಿಹಾಸಿಕ ವ್ಯಕ್ತಿ ತುಘಲಕ್ ಕುರಿತಾಗಿದ್ದರೂ ಆಧುನಿ ಭಾರತದ ರಾಜಕೀಯ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತದೆ ಮಹಾತ್ಮಾಗಾಂಧೀಜಿಯವರ ಪ್ರಕಾರ ರಾಜಕೀಯವೆಂದರೆ ತ್ಯಾಗಮಯಿ ವ್ಯಕ್ತಿಯ ಆಧ್ಯಾತ್ಮಿಕತೆಯ ಅಭಿವ್ಯಕ್ತಿ. ಪಂಡಿತ ನೆಹರೂ ಅವರ ಪ್ರಕಾರ ಅದು ಜನ ಸೇವೆಗಾಗಿ ಜೀವನ ಮುಡಿಪಾಗಿಡುವದು ಮತ್ತು ದಿಟ್ಟ ರಾಜಕಾರಿಣಿ ಶ್ರೀಮ ಇಂದಿರಾಗಾಂಧಿ ನಂತರ ಬಂದ ರಾಜಕೀಯ ನಾಯಕರು ತಿಳಿದಂತೆ ಅದು ವ್ಯಕ್ತಿಗತ ಅಧಿಕಾರದ ಚಲಾವಣೆಯ ಭ್ರಮೆಯಾಗಿದೆ. ಈ ಮೂರು ಅಂಶಗಳನ್ನು ನಾಟಕ ತನ್ನ ಗರ್ಭದಲ್ಲಿ ಅಡಗಿಸಿಕೊಂಡಿದೆ. ಧರ್ಮ ಮತ್ತು ರಾಜಕಾರಣಗ ಸಂಘರ್ಷ ನಾಟಕದುದ್ದಕ್ಕೂ ಕಾಣಿಸಿಕೊಂಡಿದೆ. ಭಾರತವು ಬಹುಧರ್ಮೀಯ ಹಾಗೂ ಬಹುಸಂಸ್ಕೃತಿಯ ನಾಡಾಗಿದ್ದರಿಂದ, ಈ ದೇಶವನ್ನು ಆಳಿ ರಾಜಮಹಾರಾಜರಿಗೆ, ಬ್ರಿಟೀಶರಿಗೆ ವಸಾಹತೋತ್ತರ ಭಾರತದ ನಾಯಕರಿ ಎಲ್ಲ ವರ್ಗದ ಜನರಲ್ಲಿ, ಮುಖ್ಯವಾಗಿ ಬಹು ಸಂಖ್ಯಾತರಾಗಿದ್ದ ಹಿಂದು ಮತ್ತು ಮುಸ್ಲೀಮರಲ್ಲಿ ಏಕತೆ ಹಾಗೂ ಸಮನ್ವಯತೆ ತಂದು ಆಡಳಿತ ನಡೆಸುವದ ಒಂದು ದೊಡ್ಡ ತಲೆನೋವಿನ ಸಮಸ್ಯೆಯಾಗಿದ್ದಂತೂ ಸತ್ಯ. ಈ ಅಂಶ ಮೇಲೆಯೂ ನಾಟಕ ಬೆಳಕು ಚೆಲ್ಲುತ್ತದೆ. ಹೀಗೆ "ತುಘಲಕ್" ನಾಟಕವು ಅತ್ಯಂ ಮಾರ್ಮಿಕವಾಗಿ ಸಂಪ್ರದಾಯಿಕತೆ ಮತ್ತು ಆಧುನಿಕತೆಯ ನಡುವಿನ ಘರ್ಷಣೆಯನ್ನು ಬಿಂಬಿಸುತ್ತದೆ. ನಾಟಕರೂಪವು ಸಂಪ್ರದಾಯಿಕವಾಗಿದ್ದು, ಕಥಾವಸ

ಆಧುನಿಕವಾಗಿದೆ. ಕಾರ್ನಾಡರು ತಮ್ಮ ನಾಟಕಗಳಿಗೆ ಪುರಾಣ, ಇತಿಹಾಸ ಮತ್ತು ಜಾನಪದಗಳಿಂದ ಕಥಾವಸ್ತುಗಳನ್ನು ಎರವಲು ಪಡೆದುಕೊಂಡಿದ್ದರೂ, ಅವುಗಳನ್ನು ಸಮಕಾಲೀನ ಸಮಸ್ಯೆಗಳಿಗೆ ಅನ್ವಯಿಸಿ, ವಿಶ್ಲೇಷಣೆ ಮಾಡಲು ಬಳಸಿಕೊಂಡಿದ್ದು ಅವರ ಪ್ರತಿಭೆಯ ವೈಶಿಷ್ಟ್ಯವಾಗಿದೆ.

–ಮುಖ್ಯ ಪರಿಕಲ್ಪನೆಗಾಗಿ ಮತ್ತು ವಿಶ್ಲೇಷಣ ಕ್ರಮಕ್ಕೆ (ಈ ಲೇಖನದಲ್ಲಿಯ ನನ್ನ ಎಮ್.ಫಿಲ್. ಪ್ರಬಂಧ 'Tradition and Modernity in Girish Karnad's Plays: A study of Hayavadana and Tughlaq,' ಡಾ. ಮೀರಾಮೂರ್ತಿ ಅವರ 'ಗಿರೀಶ ಕಾರ್ನಾಡ್ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರ, 2005 ಹಾಗೂ ಪ್ರೊ. ಜಿ. ಎಸ್. ಆಮೂರ ಅವರ 'ಗಿರೀಶ ಕಾರ್ನಾಡ ಹಾಗೂ ಭಾರತೀಯ ರಂಗಭೂಮಿ' ಮನೋಹರ ಗ್ರಂಥಮಾಲಾ, ಧಾರವಾಡ., 2012 – ಕೃತಿಗಳಿಗೆ ಉಪಕೃತನಾಗಿದ್ದೇನೆ – ಲೇಖಕರು)

*****


Scanned with OKEN Scanner

ರಿಸರ್ಚ ಎಂಬ ಇಂಗ್ಲೀಷ ಶಬ್ದಕ್ಕೆ ಕನ್ನಡದಲ್ಲಿ ಸಂಶೋಧನೆ ಎಂದು ಹೇಳಬಹುದು. ಸಂಶೋಧನೆ ಎಂಬ ಪ್ರಕ್ರಿಯೆ ಸೃಜನೇತರ ಸಾಹಿತ್ಯ ಎಂಬ ವಿಭಾಗಕ್ಕೆ ಸೇರಿಸಿದ್ದಾರೆ. ಹೀಗಾಗಿ ಇದು ಬಹಳಷ್ಟು ಜನರಿಗೆ ಆಕರ್ಷಕವಾಗಿಲ್ಲ. ಗತದ ಆಧಾರದ ಮೇಲೆ ವರ್ತಮಾನ ಸಮಾಜ ಕಟ್ಟಬೇಕಾಗಿದೆ. ಅಂದರೆ ಸಂಶೋಧನೆ ಸೃಜನವಾಗಬೇಕಿದೆ. ಎಂ. ಎಂ. ಕಲಬುರ್ಗಿಯವರು ಹೇಳುವಂತೆ, ಸಂಶೋಧಕ ಆಕಸ್ಮಿಕ ತಪ್ಪು ಹೇಳಿರಬಹುದು, ಸುಳ್ಳು ಹೇಳಲಾರ.

ಈ ಸಂಕಲನದಲ್ಲಿ ವೈವಿಧ್ಯ ಪ್ರಬಂಧಗಳ ಗುಚ್ಛ ಇದೆ. ವಚನ, ಕಾದಂಬರಿ, ನಾಟಕ, ದಲಿತ, ತತ್ವಪದ, ಬಯಲಾಟ, ಜನಪದ ಮತ್ತು ಸಮುದಾಯಕ್ಕೆ ಸಂಬಂಧಿಸಿದ ವಿಶ್ಲೇಷಣೆ ಇದೆ. ಸಂಶೋಧನಾ ಕ್ಷೇತ್ರದಲ್ಲಿ ಕಾಲಿಡುವ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ ಈ ಕ್ಷೇತ್ರದಲ್ಲಿ ಪಳಗಿರುವ ಪ್ರಬಂಧಗಳನ್ನು ಈ ಸಂಕಲನ ಒಳಗೊಂಡಿದೆ.

ಸಂಶೋಧನೆ ಎಂದರೆ ಏನು ಎಂಬ ವಿಷಯದ ಬಗ್ಗೆ ಪ್ರಾರಂಭದಲ್ಲಿ ಒಂದು ಲೇಖನ ಇದ್ದರೆ ಈ ಪುಸ್ತಕದ ಮೌಲ್ಯ ಇನ್ನೂ ಹೆಚ್ಚುತ್ತಿತ್ತು ಎನಿಸುತ್ತದೆ. ಕೇವಲ ಸಂಶೋಧನಾ ವಿದ್ಯಾರ್ಥಿಗಳಲ್ಲದೆ ಸಾಮಾನ್ಯ ಓದುಗರ ಜ್ಞಾನ ಪರಿಧಿಯನ್ನು ಈ ಗ್ರಂಥದ ಓದು ವಿಸ್ತರಿಸುತ್ತದೆ. ನನ್ನಂತಹ ಅನಾಮಿಕನಿಂದ ಚೆನ್ನುಡಿ ಬಯಸಿದ ಸಂಪಾದಕರ ಮನೋನಿರ್ಧಾರಕ್ಕೆ ನಾನು ಋಣಿಯಾಗಿದ್ದೇನೆ.

**ಪ್ರೊ. ಮಹೇಶ ತಿಪ್ಪಶೆಟ್ಟಿ**
ಸಾಹಿತಿಗಳು, ಹುನಗುಂದ



ರೂ. ೮೦/-

9 788194 812845